ಕರ್ನಾಟಕ ಸರ್ಕಾರ

## ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು

# ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಹಾಯಕ ನಿರ್ದೇಶಕರವರ ಕಛೇರಿ, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣ, ಜ್ಯೋತಿ ನಗರ, ಚಿಕ್ಕಮಗಳೂರು–577 102

ಇ–ಟಿಚಿಟ ಚಿಜಥಿಛಿಳಿಇಟ@ರುಟಿಚಿಟ.ಛಿಠಿ ಕ್ಷಟಿಜ/ಖಿಜಟ ಜಿಚಿಥ: 08262 220324 ಮೊ: 94808–86460

ಸಂಖ್ಯೆ: ಸನಿ/ಯುಸೇಕ್ರಇ/ಚಿಮ/ಪಿಆರ್/10/2013–14 ದಿನಾಂಕ:21–05–2014

**ಅಧಿಸೂಚನೆ**

ವಿಷಯ: ಭಾರತ ಸರ್ಕಾರದ ಮಾಹಿತಿ ಹಕ್ಕು ಅಧಿನಿಯಮ 2005ರ ಕಲಂ 4(1) (ಬಿ) ಅನುಸಾರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಂಬಂಧಿಸಿದಂತೆ ಕಛೇರಿಯ ಮಾಹಿತಿಯನ್ನು ಸಲ್ಲಿಸುವ ಬಗ್ಗೆ.

ಭಾರತ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಂಬಂಧ ಹಕ್ಕು ಅಧಿನಿಯಮ 2005ರ (ಅಚಿಟಿಣಡಿಚಿಟ ಂಛಿಣ 22 ಆಜ 2005) ಸೆಕ್ಷನ್ 5(1) 5(2) 19(1) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮಾನ್ಯ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರು ಇಲಾಖೆಯ ವ್ಯಾಪ್ತಿಯ ಮಾಹಿತಿಯನ್ನು ಕೋರುವ ವ್ಯಕ್ತಿಗಳಿಗೆ ಅಂತಹ ಮಾಹಿತಿಯನ್ನು ಮೇಲಿನ ಕಾಯ್ದೆಯನ್ವಯ ಒದಗಿಸಲು ಮಾಹಿತಿ ಕೋರುವ ಅರ್ಜಿಗಳು ಅಥವಾ ಮೇಲ್ಮನವಿಗಳನ್ನು ಸ್ವೀಕರಿಸಲು ಅನುಕ್ರಮವಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿ ಹಾಗೂ ಮೇಲ್ಮನವಿ ಪ್ರಾಧಿಕಾರಿಗಳನ್ನಾಗಿ ಈ ಕೆಳ ಕಂಡಂತೆ ಇಲಾಖೆಯಲ್ಲಿ ನೇಮಿಸಲಾಗಿದೆ.

| ಕ್ರ. ಸಂ. | ಇಲಾಖೆಗಳ ಹೆಸರು | ಮಾಹಿತಿ ಪಡೆಯುವ ಹಕ್ಕು ಕಾಯ್ದೆ (2005ರ ಸೆಕ್ಷನ್ 5(1) 5(2)ರ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ | ಮಾಹಿತಿ ಪಡೆಯುವ ಹಕ್ಕು ಕಾಯ್ದೆ 2005ರ ಸೆಕ್ಷನ್ 19(1)ರ ಪ್ರಕಾರ ಮೇಲ್ಮನವಿ ಪ್ರಾಧಿಕಾರಿ |
|---|---|---|---|
| 1 | ಸಹಾಯಕ ನಿರ್ದೇಶಕರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಮಗಳೂರು | ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಮಗಳೂರು | ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು |

ದೇಶದಲ್ಲಿ ಯುವಜನರ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಮುಂದುವರೆದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವೂ ಸಹ ಒಂದಾಗಿರುತ್ತದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಮುಖಾಂತರ ಯುವಜನತೆಗೆ ಸಂಬಂಧಿಸಿದ ಅವಶ್ಯಕತೆಗಳನ್ನು ನಗರ ಮತ್ತು ಗ್ರಾಮಾಂತರ ಪ್ರದೇಶದ ಯುವಕ–ಯುವತಿಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಾಮಾ ಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆ, ಕ್ರೀಡೆ ಮತ್ತು ಆಟಗಳಲ್ಲಿ ತರಬೇತಿ, ಸ್ವಯಂ ಉದ್ಯೋಗ ಕಾರ್ಯಕ್ರಮಗ ಳಲ್ಲಿ ತೊಡಗಿಸಿಕೊಳ್ಳುವುದರಲ್ಲಿ ತರಬೇತಿ ಮುಂತಾದ ಯೋಜನೆಗಳಲ್ಲಿ ಯುವಕ–ಯುವತಿಯರು ಭಾಗವಹಿಸುವಂತೆ ಪ್ರೋತ್ಸಾಹಿಸುವುದರ ಜೊತೆಗೆ ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ಕಾರ್ಯರೂಪಕ್ಕೆ ತರುತ್ತಿದೆ. ಇಲಾಖೆಯಲ್ಲದೆ ಸ್ವಯಂ ಸೇವಾ ಸಂಸ್ಥೆಗಳು ಹಾಗೂ ಕ್ರೀಡಾ ಸಂಸ್ಥೆಗಳು ಸಹ ಯುವಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಯುವಜನ ಮತ್ತು ಕ್ರೀಡಾ ಸಂಸ್ಥೆಗಳು ಸಹ ಯುವಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿವೆ. ಯುವಜನ ಮತ್ತು ಕ್ರೀಡಾ ಚಟುವಟಿಕೆಗಳಿಗೆ ಆರ್ಥಿಕ ಅನುದಾನ, ಯುವಜನರ ಸಾಧನೆ

ಹಾಗೂ ತಮ್ಮ ಶೇಯೋಭಿವೃದ್ಧಿಗಾಗಿ ಹಮ್ಮಿ ಕೊಳ್ಳುವ ಕಾರ್ಯಕ್ರಮಗಳಿಗೆ ಇಲಾಖೆಯ ಗಮನಾರ್ಹ ಕೊಡುಗೆಯನ್ನು ನೀಡುತ್ತಿದೆ.

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ 2005ರ ಮಾಹಿತಿ ಹಕ್ಕು ಕಾಯ್ದೆ ಇದಾಗಿದ್ದು, ಸದರಿ ಕಾಯ್ದೆಯ ಕಲಂ 4(1) ಬಿ ರಡಿ ಒಟ್ಟು 17 ವಿವಿಧ ಅಂಶಗಳನ್ನೊಳಗೊಂಡ ಒಂದು ಕೈಪಿಡಿ ತಯಾರಿಸಬೇಕಾಗಿದ್ದು, ಈ ಪ್ರಾಧಿಕಾರದ ವ್ಯಾಪ್ತಿಗೆ ಬರುವ ಘಟಕಗಳ ರಚನೆ, ಕಾರ್ಯಗಳು ಮತ್ತು ಕರ್ತವ್ಯಗಳ ಮಾಹಿತಿ ಈ ಕೆಳಕಂಡಂತಿರುತ್ತದೆ

# ಜಿಲ್ಲಾ ಪಂಚಾಯಿತಿ ಕಾರ್ಯಕ್ರಮಗಳು

## ಯುವಜನ ಸಂಘಗಳು

ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ರಾಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 15 ರಿಂದ 35 ವರ್ಷದ ವಯೋಮಿತಿಗೆ ಒಳಪಟ್ಟಿರುವ ಯುವಕ ಮತ್ತು ಯುವತಿಯರಿಗೆ ಕ್ರಮವಾಗಿ ಯುವಕ ಸಂಘ ಮತ್ತು ಯುವತಿ ಮಂಡಳಿಯನ್ನು ಗ್ರಾಮ ಪಂಚಾಯಿತಿಯ ಶಿಫಾರಸ್ಸಿನ ಮೇರೆಗೆ ಜಿಲ್ಲಾ ಯುವಜನ ಸೇವಾ ಮತ್ತು ಕ್ರೀಡಾ ಮಂಡಳಿಗೆ ಸಂಯೋಜನೆ ಮಾಡಲಾಗುವುದು. ಗ್ರಾಮಾಂತರ ಪ್ರದೇಶದಲ್ಲಿರುವ ಯುವಕ ಮತ್ತು ಯುವತಿಯರು ತಮ್ಮ ಬಿಡುವಿನ ವೇಳೆಯಲ್ಲಿ ಉತ್ತಮ ಹವ್ಯಾಸವನ್ನು ಬೆಳೆಸಿಕೊಳ್ಳಲು ಹಾಗೂ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸಲು ಗ್ರಾಮ ನೈರ್ಮಲ್ಯ, ಶ್ರಮದಾನ, ಸಾರ್ವಜನಿಕ ಸ್ವತ್ತು ಜೋಪಾಸೆನೆ, ವಯಸ್ಕರ ಶಿಕ್ಷಣ, ಯುವಕರಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು, ಉಳಿತಾಯ ಯೋಜನೆಗೆ ಪ್ರೋತ್ಸಾಹಿಸುವುದು. ಆಧುನಿಕ ಕೃಷಿ ತಂತ್ರಜ್ಞಾನವನ್ನು ಅನು ಷ್ಠಾನಕ್ಕೆ ತರುವಂತೆ ಪ್ರಚಾರ ಕೈಗೊಳ್ಳುವುದು. ನಶಿಸಿ ಹೋಗುತ್ತಿರುವ ಜನಪದ ಕಲೆಗಳಿಗೆ ಪ್ರೋತ್ಸಾಹ ನೀಡಿ, ಅವುಗಳ ಅಭಿವೃದ್ಧಿಗೆ ಶ್ರಮಿಸುವಂತೆ ಮಾಡುವುದು ಮತ್ತು ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವುದು ಉದ್ದೇಶವಾಗಿದೆ.

ಯುವಕ ಸಂಘಗಳು/ಯುವತಿ ಮಂಡಳಿಗಳು ರೂ.100.00ಗಳ ಸಂಯೋಜನಾ ಶುಲ್ಕವನ್ನು ಮತ್ತು ಪ್ರತಿ ವರ್ಷ ಸಂಯೋಜನೆಯನ್ನು ನವೀಕರಿಸಲು ರೂ.100.00ಗಳ ಶುಲ್ಕವನ್ನು ನೀಡಬೇಕಾಗುತ್ತದೆ. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಂಯೋಜನೆಗೊಳ್ಳಬಯಸುವ ಯುವಕ ಸಂಘ ಮತ್ತು ಯುವತಿ ಮಂಡಳಿಗಳು ಮೊದಲು ಸಹಾಕರ ಸಂಘಗಳ ನೋಂದಾವಣೆ ಇಲಾಖೆಯಲ್ಲಿ ಅಲ್ಲಿಯ ನಿಯಮದಂತೆ ಸಂಘವನ್ನು ನೋಂದಾವಣೆ ಮಾಡಿಕೊಳ್ಳಬೇಕು. ಅಂತಹ ಸಂಘಗಳು ಸಹಾಯಧನ ಪಡೆಯಲು ಅರ್ಹರಿದ್ದು, ಕ್ರೀಡೋಪಕರಣಗಳ ಖರೀದಿಗೆ, ಆಟದ ಮೈದಾನ ಅಭಿವೃದ್ಧಿಗೆ, ಹೊನಲು ಬೆಳಕಿನ ಸಲಕರಣೆಗಳ ಖರೀದಿಗೆ, ಕುಸ್ತಿ ಅಖಾಡಗಳ ಅಭಿವೃದ್ಧಿಗೆ, ಬಯಲು ರಂಗಮಂದಿರ ಮತ್ತು ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಸಾಹಸ ಕ್ರೀಡಾ ಚಟುವಟಿಕೆಗಳ ಸಂಘಟನೆಗೆ, ವ್ಯಾಯಾಮ ಶಾಲೆಗಳಲ್ಲಿನ ಉಪಕರಣ ಖರೀದಿಗೆ ಮತ್ತು ಯುವಕ ಸಂಘದ ಕಟ್ಟಡ ನಿರ್ಮಾಣಕ್ಕೆ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ, ಅರ್ಹತೆ ಮತ್ತು ಆದ್ಯತಾನುಸಾರ ಜಿಲ್ಲಾ ಪಂಚಾಯತ್‌ನ ಮೂಲಕ ಧನ ಸಹಾಯವನ್ನು ನೀಡಲಾಗುವುದು.

ರಚನಾತ್ಮವಾಗಿ ಕಾರ್ಯನಿರ್ವಹಿಸುತ್ತಿರುವ ಯುವಕ ಸಂಘ ಮತ್ತು ಯುವತಿ ಮಂಡಳಿಗಳಿಗೆ ಇಲಾಖೆ ನಿಗದಿ ಪಡಿಸಿರುವ ನಿಯಮದ ಪ್ರಕಾರ ಸಹಾಯಧನ ನೀಡಲಾಗುವುದು. ಈ ಸಹಾಯಧನವು ರೂ.5000–00 ಗಳ ಕ್ರೀಡಾ ಸಾಮಗ್ರಿ ಹಾಗೂ ಸಾಂಸ್ಕೃತಿಕ ಸಲಕರಣೆಗಳ ಖರೀದಿಗೆ ನೀಡಲಾಗುವುದು. ಕ್ರೀಡಾ/ ಸಾಂಸ್ಕೃತಿಕ ಯುವಕ ಸಂಘದ ಕಟ್ಟಡ ಕಟ್ಟಲು ಸಮವಂತಿಕೆ ಆಧಾರದ ಮೇಲೆ ನೀಡಲಾಗುವುದು. ಸಂಘದ ಕಟ್ಟಡ ನಿರ್ಮಾಣಕ್ಕಾಗಿ ಸ್ವಂತ ನಿವೇಶನ ಹೊಂದಿರುವುದು ಅವಶ್ಯಕ. ಸಂಘಗಳು ಸಕ್ರಿಯವಾಗಿ ಯುವಚಟುವಟಿಕೆಗಳನ್ನು ನಡೆಸುತ್ತಿದ್ದು, ಪ್ರತಿವರ್ಷ ನವೀಕರಿಸಲ್ಪಟ್ಟಿರಬೇಕು. ಎಲ್ಲಾ ಸಹಾಯಧನವನ್ನು ಶೇ.50ರ ಸಮವಂತಿಕೆ ಆಧಾರದ ಮೇಲೆ ನಿರ್ಧರಿಸಿದ ಗರಿಷ್ಠ ಯೋಜನಾ ವೆಚ್ಚಕ್ಕೆ ಅನುಗುಣವಾಗಿ ನೀಡಲಾಗುವುದು.

## ಆಟದ ಮೈದಾನಗಳಿಗೆ ಹೊನಲು ದೀಪ ಮತ್ತು ಇತರೆ ಸುಧಾರಿತ ಸಾಧನೆಗಳು

ಗ್ರಾಮಾಂತರ ಪ್ರದೇಶದಲ್ಲಿರುವ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಮುಖ್ಯವಾಗಿ ಆಟದ ಮೈದಾನದ ಕೊರತೆ ಇರುವುದರಿಂದ ಮತ್ತು ಕ್ರೀಡಾ ಚಟುವಟಿಕೆಗಳನ್ನು ನಡೆಸಲು ಹೊನಲು ಬೆಳಕಿನ ವ್ಯವಸ್ಥೆ ಬೇಕಾಗಿರುವುದರಿಂದ ಸಹಾಯವನ್ನು ನೀಡುವುದು. ಗ್ರಾಮಾಂತರ ಪ್ರದೇಶದ ಕ್ರೀಡಾಪಟುಗಳಿಗೆ ಕ್ರೀಡಾಭ್ಯಾಸ ಮಾಡಲು ಅವಕಾಶ ಕಲ್ಪಿಸುವುದು. ಆಟದ ಮೈದಾನದ ಅಭಿವೃದ್ಧಿಗೆ ಅನುದಾನ ಬಯಸುವ ಸಂಸ್ಥೆಗಳಿಗೆ ಸ್ವಂತ ಜಮೀನು (ಆಟದ ಬಯಲು) ಇರತಕ್ಕದ್ದು. ಶೇ.50 ರಷ್ಟು ಸಮವಂತಿಕೆ ಭರಿಸಲು ಸಿದ್ಧವಿರುವ ಸಂಸ್ಥೆಗಳಿಗೆ ಗರಿಷ್ಟ ರೂ.25,000/-ಗಳನ್ನು ಅನುದಾನ ರೂಪದಲ್ಲಿ ನೀಡಲಾಗುವುದು.

## ಕ್ರೀಡಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ

ಗ್ರಾಮಾಂತರ ಪ್ರದೇಶದಲ್ಲಿ ಮುಖ್ಯವಾಗಿ ತಾಲೂಕು ಮಟ್ಟದಲ್ಲಿ ಉದಯೋನ್ಮುಖ ಕ್ರೀಡಾಪಟುಗಳಿಗೆ ದೈನಂದಿನ ಕ್ರೀಡಾಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಮತ್ತು ತಮ್ಮ ದೇಹದಾಢ್ಯತೆಯನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಸುಸಜ್ಜಿತ ಕ್ರೀಡಾಂಗಣವನ್ನು ನಿರ್ಮಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಕ್ರೀಡಾ ಚಟುವಟಿಕೆಗಳ ಜೊತೆಗೆ ತರಬೇತಿ ಶಿಬಿರಗಳನ್ನು ನಡೆಸುವುದು. ತಾಲ್ಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಗರಿಷ್ಠ ರೂ.10.00ಲಕ್ಷಗಳ ಅನುದಾನವನ್ನು ಜಿಲ್ಲಾಪಂಚಾಯತ್ ವಲಯದ ಅನುದಾನದಿಂದ ಒದಗಿಸಬಹುದು. ಕ್ರೀಡಾಂಗಣದಲ್ಲಿರುವ ಉಪಕರಣಗಳನ್ನು ಉಪಯೋಗಿಸಿಕೊಳ್ಳಲು ಉಚಿತವಾಗಿ ಕ್ರೀಡಾಪಟುಗಳಿಗೆ ಅನುಕೂಲವನ್ನು ಕಲ್ಪಿಸುವುದು.

ನಿರ್ವಹಣೆಯಲ್ಲಿ ಕ್ರೀಡಾಂಗಣ ನೋಡಿಕೊಳ್ಳುವ ಕಾವಲುಗಾರರು, ನೀರು ಸರಬರಾಜು, ವಿದ್ಯುತ್ ಸರಬರಾಜು ಸೌಲಭ್ಯ ಮತ್ತು ಕಾಲಕಾಲಕ್ಕೆ ಬೇಕಾಗುವ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುವುದು.

## ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣಭತ್ಯೆ ಮತ್ತು ದಿನಭತ್ಯೆ

ಇಲಾಖೆಯಿಂದ ಏರ್ಪಡಿಸುವ ವಿವಿಧ ಕ್ರೀಡಾ ಚಟುವಟಿಕೆಗಳಲ್ಲಿ ಜಿಲ್ಲಾಮಟ್ಟದಿಂದ ರಾಜ್ಯ ಮಟ್ಟದವರೆಗೆ ಭಾಗವಹಿಸುವ ಗ್ರಾಮಾಂತರ ಕ್ರೀಡಾಪಟುಗಳಿಗೆ ಯುವಕ,ಯುವತಿಯರಿಗೆ ಪ್ರಯಾಣಭತ್ಯೆ, ದಿನಭತ್ಯೆಯನ್ನು ನೀಡಿ ಪ್ರೋತ್ಸಾಹಿಸುವುದು ಮತ್ತು ಕ್ರೀಡಾ ಕಾರ್ಯಕ್ರಮ ಸಾಂಸ್ಕೃತಿಕ ಸಂಘಟನೆ ಮತ್ತು ಸ್ಪರ್ಧೆಯನ್ನು ಏರ್ಪಾಡು ಮಾಡಿ ಅವರ ಪ್ರತಿಭೆ ಯನ್ನು ಪ್ರದರ್ಶಿಸಲು ಅವಕಾಶ ಕಲ್ಪಿಸುವುದು. ವಿವಿಧ ಕ್ರೀಡಾಕೂಟಗಳು, ಸಾಂಸ್ಕೃತಿಕ ಮೇಳಗಳು, ತರಬೇತಿ ಶಿಬಿರಗಳು ಮುಂತಾದವುಗಳಲ್ಲಿ ಭಾಗವಹಿಸುವ ಸ್ಪರ್ಧಾಳುಗಳಿಗೆ ತಾಲ್ಲೂಕು ಕೇಂದ್ರದಿಂದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಹೋಗಿ ಬರುವ ಸಾಮಾನ್ಯ ದರದ ಬಸ್ ವೆಚ್ಚ, ದಿನ ಒಂದಕ್ಕೆ ರೂ.75/- ರಂತೆ ದಿನಭತ್ಯೆಯನ್ನು ಪಾವತಿಸಲಾಗುವುದು ಹಾಗೂ ಪ್ರೋತ್ಸಾಹಿಸುವುದು.

## ಸಾಹಸ ಕ್ರೀಡೆ

ಯುವಕ/ಯುವತಿಯರಲ್ಲಿ ಸಾಹಸ ಕ್ರೀಡಾ ಮನೋಭಾವವನ್ನು ಬೆಳೆಸಲು ಅನುಕೂಲವಾಗುವಂತೆ ಸಾಹಸ ಕ್ರೀಡಾ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವುದು. ಶಿಲಾರೋಹಣ, ಚಾರಣ, ಪರಿಸರ ಅಧ್ಯಯಾನ ಕಾರ್ಯಕ್ರಮ, ರ್‍ಯಾಪ್ಲಿಂಗ್, ಕೃತಕ ಗೋಡೆ ಹತ್ತುವ ಕಾರ್ಯಕ್ರಮ, ಪ್ಯಾರಾಸೈಲಿಂಗ್, ರಿವರ್ ರ್‍ಯಾಫ್ಟಿಂಗ್ ಮುಂತಾದ ಸಾಹಸಮಯ ಕಾರ್ಯಕ್ರಮಗಳನ್ನು ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ಹಾಗೂ ಸ್ಥಳೀಯ ಸಂಬಂಧಪಟ್ಟ ಸಾಹಸ ಸಂಘಸಂಸ್ಥೆಗಳ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗುವುದು. ಈ ಕಾರ್ಯಕ್ಕೆ ಬೇಕಾದ ಇನ್‌ಸ್ಟ್ರಕ್ಟರ್‌ಗಳನ್ನು ಜೇತ್ನಾ ಹಾಗೂ ಇತರೆ ಸಂಸ್ಥೆಗಳಿಂದ ಪಡೆಯಲಾಗುವುದು.

## ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡೆಗಾಗಿ ಉತ್ತೇಜನ

ರಾಜ್ಯ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ಪ್ರತಿಭಾವಂತ ಕ್ರೀಡಾಪಟುಗಳಿಗೆ ಕ್ರೀಡಾ ಸಲಕ ರಣೆ, ಸಮವಸ್ತ್ರ ಮತ್ತು ನಗದು ಬಹುಮಾನ ನೀಡಿ ಪ್ರೋತ್ಸಾಹಿಸುವುದು. ಉನ್ನತ ಸಾಧನೆ ತೋರುವ ಸಂದರ್ಭಗಳಲ್ಲಿ ಅವರಿಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಭಾಗವಹಿಸುವ ಕ್ರೀಡೆಗೆ ಸಂಬಂಧಪಟ್ಟ ಕ್ರೀಡಾ ಸಾಮಗ್ರಿಗಳನ್ನು ಸಮವಸ್ತ್ರಗಳನ್ನು ನೀಡಬಹುದು ಮತ್ತು ಕ್ರೀಡೆಯಲ್ಲಿ ಹೆಚ್ಚು ಸಾಧನೆ ಮಾಡಲು ಪ್ರೋತ್ಸಾಹಧನ ನೀಡುವುದು.

**ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡಾ ತರಬೇತಿ ಶಿಬಿರ**

ಗ್ರಾಮಾಂತರ ಪ್ರದೇಶದ ಶಾಲಾ ವಿದ್ಯಾರ್ಥಿಗಳಿಗೆ ಸೂಕ್ತ ಕ್ರೀಡಾ ತರಬೇತಿ ಇಲ್ಲದೇ ಇರುವುದರಿಂದ ತರಬೇತಿ ಶಿಬಿರಗಳನ್ನು ಏರ್ಪಡಿಸಿ ಅವರಿಗೆ ಉತ್ತೇಜನ ನೀಡುವುದು. ಬೇಸಿಗೆ ರಜೆಯನ್ನು ಸದುಪಯೋಗ ಮಾಡಲು ಅವಕಾಶ ಕಲ್ಪಿಸುವುದು ಹಾಗೂ ಉದಯೋನ್ಮುಖ ಕ್ರೀಡಾಪಟುಗಳನ್ನು ಗುರುತಿಸುವುದು. ಇಲಾಖೆಯ ತರಬೇತುದಾರರು ಹಾಗೂ ಶಿಕ್ಷಣ ಇಲಾಖೆಯ ದೈಹಿಕ ಶಿಕ್ಷಣ ಶಿಕ್ಷಕರ ನೆರವಿನಿಂದ ಶಿಬಿರಗಳನ್ನು ನಡೆಸುವುದು.

**ಕ್ರೀಡಾ ಸಾಮಗ್ರಿ ಖರೀದಿಗಾಗಿ ಜಿಲ್ಲಾ ಯುವಜನ ಸೇವಾ ಮಂಡಳಿಗೆ ಸಹಾಯ**

ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭಾರತೀಯ ಕ್ರೀಡಾ ಪ್ರಾಧಿಕಾರದ ಮತ್ತು ಕರ್ನಾಟಕ ಕ್ರೀಡಾ ಪ್ರಾಧಿಕಾರದ ತರಬೇತುದಾರರಿಗೆ ದಿನನಿತ್ಯದ ಕ್ರೀಡಾ ಚಟುವಟಿಕೆಗಳನ್ನು ತಮ್ಮ ತಮ್ಮ ಕ್ರೀಡೆಗಳಲ್ಲಿ ನಿರ್ವಹಿಸಲು ಅವರಿಗೆ ಬೇಕಾದ ಕ್ರೀಡಾ ಸಾಮಗ್ರಿಗಳನ್ನು ಒದಗಿಸಿ ತರಬೇತಿ ಕಾರ್ಯಕ್ರಮಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ವ್ಯವಸ್ಥೆ ಮಾಡಲಾಗುವುದು.

**ಯುವಚೇತನ, ಯುವ ಪ್ರೇರಣಾ ಮತ್ತು ಯುವ ಸಂವಹನ ತರಬೇತಿ ಶಿಬಿರಗಳು**

ಯುವಜನರಲ್ಲಿ ವ್ಯಕ್ತಿತ್ವ ವಿಕಾಸ ಮತ್ತು ಹೊಸ ಕೌಶಲ್ಯಗಳನ್ನು ಬೆಳೆಸಿ, ಅವರಲ್ಲಿ ಅರಿವು ಆತ್ಮಸ್ಥೈರ್ಯವನ್ನು ರೂಪಿಸಲು ಯುವಚೇತನಾ ಎಂಬ ತರಬೇತಿಯನ್ನು ಬೆಂಗಳೂರಿನಲ್ಲಿ ಏರ್ಪಡಿಸಲಾಗುತ್ತಿದ್ದು, ಚಿಕ್ಕಮಗಳೂರು ಜಿಲ್ಲೆ ಯಿಂದ ಯುವಕ ಮತ್ತು ಯುವತಿಯರನ್ನು ತರಬೇತಿಗಾಗಿ ನಿಯೋಜಿಸಲಾಗುವುದು.

ಯುವಜನರನ್ನು ಸ್ವಯಂ ಉದ್ಯೋಗಿಗಳಾಗುವಂತೆ ಪ್ರೋತ್ಸಾಹಿಸಲು ಅವರಿಗೆ ಅಗತ್ಯವಾದ ತರಬೇತಿ ನೀಡಲು ಯುವ ಪ್ರೇರಣಾ ಎಂಬ ಯೋಜನೆಯ ಅಡಿಯಲ್ಲಿ ಸ್ವಯಂ ಉದ್ಯೋಗಿಗಳಾಗಲು ಆಸಕ್ತಿ ಇರುವ ಯುವಜನರಿಗೆ ಯೋಜನಾ ವರದಿ ಸಿದ್ಧಪಡಿಸಿಕೊಳ್ಳುವುದು. ಮೂಲ ಬಂಡವಾಳಕ್ಕೆ ಬ್ಯಾಂಕ್ ಸಾಲ ಸೌಲಭ್ಯ ಪಡೆದುಕೊಳ್ಳುವುದು. ಉದ್ಯಮ ನಿರ್ವಹಣೆಗೆ ಬೇಕಾದ ಮೂಲ ಜ್ಞಾನ ಮತ್ತು ಪರಿಣತಿಯನ್ನು ಬೆಳೆಸಿಕೊಳ್ಳುವುದು ಮುಂತಾದ ವಿಷಯ ಗಳಲ್ಲಿ ತರಬೇತಿ ನೀಡಲಾಗುತ್ತಿದ್ದು ಚಿಕ್ಕಮಗಳೂರು ಜಿಲ್ಲೆಯಿಂದ ಯುವಕ ಯುವತಿಯರನ್ನು ನಿಯೋಜಿಸಲಾಗುತ್ತಿದೆ.

ಯುವಜನರಲ್ಲಿ ನಾಯಕತ್ವ ಬೆಳವಣಿಗೆ, ವ್ಯಕ್ತಿತ್ವ ವಿಕಾಸಕ್ಕೆ ಅನುವು ಮಾಡಿಕೊಳ್ಳಲು ಅವರ ಸಂವಹನಾ ಕೌಶಲ್ಯಗಳ ವೃದ್ಧಿಗಾಗಿ ಯುವ ಸಂವಹನ ತರಬೇತಿ ಶಿಬಿರಗಳನ್ನು ನಡೆಸಲಾಗುತ್ತಿದ್ದು, ಚಿಕ್ಕಮಗಳೂರು ಜಿಲ್ಲೆಯಿಂದ ಯುವಕ, ಯುವತಿಯರನ್ನು ಕಾಲಕಾಲಕ್ಕೆ ನಿಯೋಜಿಸಲಾಗುತ್ತಿದೆ. ಪ್ರಶಿಕ್ಷಣಾರ್ಥಿಗಳಿಗೆ ತಮ್ಮ ತಾಲ್ಲೂಕು ಕೇಂದ್ರದಿಂದ ತರಬೇತಿ ಏರ್ಪಡಿಸುವ ಸ್ಥಳಕ್ಕೆ ಹೋಗಿ ಬರುವ ಬಸ್‌ದರವನ್ನು ನೀಡುವುದರ ಜೊತೆಗೆ ಊಟ ಮತ್ತು ವಸತಿಯ ಸೌಲಭ್ಯವನ್ನು ಇಲಾಖೆಯಿಂದ ಉಚಿತವಾಗಿ ನೀಡಲಾಗುವುದು.

ಸದರಿ ತರಬೇತಿಗಳನ್ನು ಗಿರಿಜನ ಉಪಯೋಜನೆ ಕಾರ್ಯಕ್ರಮದಡಿ ಪರಿಶಿಷ್ಟ ಪಂಗಡದ ಸಂಘಗಳ ಸದಸ್ಯರುಗಳಿಗೆ/ಕ್ರೀಯಾಶೀಲ ಯುವಜನರಿಗೆ ಪ್ರತ್ಯೇಕವಾಗಿ ಇಲಾಖಾ ವತಿಯಿಂದ ಪ್ರತಿ ವರ್ಷವು ನೀಡಲಾಗುತ್ತಿದೆ.

**ಯುವಜನ ಮೇಳಗಳು**

ಯುವಜನರಲ್ಲಿರುವ ಸಾಹಿತ್ಯ, ಸಾಂಸ್ಕೃತಿಕ ಪ್ರತಿಭೆಗಳನ್ನು ಹೊರಗೆಳೆಯಲು ಹಾಗೂ ನಾಡಿನ ಪರಂಪರೆಯನ್ನು ಸಾರುವ ಕಲಾ ಪ್ರತಿಭೆ ತೋರಲು ಇಲಾಖೆಯು ಪ್ರತಿ ವರ್ಷ ತಾಲ್ಲೂಕು, ಜಿಲ್ಲಾ ಮತ್ತು ಹಂಚಿಕೆಯಾದಲ್ಲಿ ವಿಭಾಗ ಮತ್ತು ರಾಜ್ಯಮಟ್ಟದಲ್ಲಿ ಯುವಜನ ಮೇಳಗಳನ್ನು ಚಿಕ್ಕಮಗಳೂರು ಜಿಲ್ಲೆಯಲ್ಲಿ

ಸಂಘಟಿಸುತ್ತಿದೆ. ಯುವಜನರು ಜಾನಪದ ಕಲಾ ಪ್ರಕಾರಗಳಾದ ಭಾವಗೀತೆ, ಗೀಗೀಪದ, ಲಾವಣಿ, ಜಾನಪದ ಗೀತೆ, ಜಾನಪದ ನೃತ್ಯ, ಸೋಬಾನೆ ಪದ, ಜೋಳ/ರಾಗಿ ಬೀಸುವ ಪದ, ವೀರಗಾಸೆ, ಕೋಲಾಟ, ಡೊಳ್ಳುಕುಣಿತ, ಸಣ್ಣಾಟ, ದೊಡ್ಡಾಟ ಏಕಪಾತ್ರಭಿನಯ ಮುಂತಾದವುಗಳಲ್ಲಿ ತಮ್ಮ ಪ್ರಾವೀಣ್ಯವನ್ನು ಪ್ರದರ್ಶಿಸುವರು.

**ಯುವಜನೋತ್ಸವ**

ಯುವಜನರಲ್ಲಿ ಸಾಂಸ್ಕೃತಿಕ ಪ್ರತಿಯನ್ನು ಗುರುತಿಸಿ, ಪ್ರೋತ್ಸಾಹಿಸಲು ಪ್ರತಿ ವರ್ಷ ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವದ ಅಂಗವಾಗಿ ಜನವರಿ 12 ರಂದು ಕೇಂದ್ರ ಸರ್ಕಾರದಿಂದ ರಾಷ್ಟ್ರೀಯ ಯುವಜನೋತ್ಸವವನ್ನು ನಡೆಸಲಾಗುತ್ತಿದೆ. ಇದರಲ್ಲಿ ಯುವಜನರಿಗಾಗಿ ಶಾಸ್ತ್ರೀಯ ಸಂಗೀತ (ಕರ್ನಾಟಕ ಮತ್ತು ಹಿಂದೂಸ್ಥಾನಿ) ಶಾಸ್ತ್ರೀಯ ನೃತ್ಯ, ಶಾಸ್ತ್ರೀಯ ಲಘು ವಾದ್ಯ, ಜಾನಪದ ಗೀತೆ, ಜಾನಪದ ನೃತ್ಯ, ಏಕಾಂಕ ನಾಟಕ ಹಾಗೂ ಚರ್ಚಾ ಸ್ಪರ್ಧೆಗಳನ್ನು ಏರ್ಪಡಿಸಲಾಗುವುದು.

ಜಿಲ್ಲಾಮಟ್ಟದಲ್ಲಿ ವಿಜೇತರಾದವರನ್ನು ಬೇರೆ ಬೇರೆ ಜಿಲ್ಲೆಗಳಲ್ಲಿ ಏರ್ಪಡಿಸುವ ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಪ್ರವಾಸ ಭತ್ಯೆ ಮತ್ತು ದಿನಭತ್ಯೆಯನ್ನು ನೀಡಿ ನಿಯೋಜಿಸಲಾಗುವುದು. ರಾಜ್ಯಮಟ್ಟದಲ್ಲಿ ವಿಜೇತರಾದವರನ್ನು ರಾಷ್ಟ್ರ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಲಾಖೆಯಿಂದ ನಿಯೋಜಿಸಲಾಗುವುದು. ಈ ರಾಷ್ಟ್ರೀಯ ಯುವಜನೋತ್ಸವ ದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಲು ಕರ್ನಾಟಕದಿಂದ 75 ಜನರ ತಂಡವನ್ನು ಕಳುಹಿಸಿಕೊಡುವ ಅವಕಾಶವಿದೆ.

**ರಾಜ್ಯ ಯುವ ಪ್ರಶಸ್ತಿಗಳು**

ತಮ್ಮ ಸಮಯವನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡು ಸಮಾಜದ ಒಳಿತಿಗಾಗಿ ಕಾರ್ಯನಿರ್ವಹಿಸುವ ಇಲಾಖೆಗೆ ನೋಂದಾಯಿಸಲ್ಪಟ್ಟ ಯುವಕ ಸಂಘಗಳ ಮತ್ತು ಯುವತಿ ಮಂಡಳಿಗಳ ಸದಸ್ಯರು ಸಮಾಜ ಸೇವೆ. ಸಾಕ್ಷರತೆ, ಸಾಮಾಜಿಕ ಪಿಡುಗುಗಳ ಬಗ್ಗೆ ಜಾಗೃತಿ, ನೈರ್ಮಲ್ಯ ಕಾಪಾಡುವಿಕೆ, ಆರೋಗ್ಯ, ಪರಿಸರ ರಕ್ಷಣೆ ಮುಂತಾದವುಗಳಲ್ಲಿ ಸಕ್ರಿಯವಾಗಿ ಹಾಗೂ ಪರಿಣಾಮಕಾರಿಯಾಗಿ ತೊಡಗಿರುವುದನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಇಲಾಖೆಯ ವತಿಯಿಂದ ಪ್ರತಿವರ್ಷ ಎರಡು ಸಂಘಗಳಿಗೆ ಹಾಗೂ ಹತ್ತು ಜನ ಯುವಕ/ ಯುವತಿ ಯರಿಗೆ ರಾಜ್ಯಯುವ ಪ್ರಶಸ್ತಿ ಗಳನ್ನು ನೀಡಿ ಗೌರವಿಸಲಾಗುತ್ತಿದೆ. ಈ ಪ್ರಶಸ್ತಿಯು ಪ್ರತಿಸಂಘಗಳಿಗೆ ರೂ.25,000/- ಗಳಂತೆ ಹಾಗೂ ವೈಯಕ್ತಿಕವಾಗಿ ನೀಡುವ ಪ್ರಶಸ್ತಿಯಲ್ಲಿ ರೂ.10,000/-ಗಳ ನಗದು ಪ್ರಶಸ್ತಿ ಒಳಗೊಂಡಿರುತ್ತದೆ. ಈ ಪ್ರಶಸ್ತಿಗಾಗಿ ಸೂಕ್ತವಾದ ಪ್ರಚಾರ ನೀಡಿ, ಪ್ರಸ್ತಾವನೆಗಳನ್ನು ಆಹ್ವಾನಿಸಿ, ಮಾನ್ಯ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರ ಅಧ್ಯಕ್ಷತೆಯಲ್ಲಿ ಇರುವ ಸಮಿತಿಯು ಜಿಲ್ಲಾಮಟ್ಟದಲ್ಲಿ ಸ್ವೀಕೃತವಾದ ಎಲ್ಲಾ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಜಿಲ್ಲೆಯಿಂದ ಒಂದು ವೈಯಕ್ತಿಕ ಮತ್ತು ಒಂದು ಸಾಂಘಿಕ ಪ್ರಸ್ತಾವನೆಯನ್ನು ರಾಜ್ಯಮಟ್ಟಕ್ಕೆ ಶಿಫಾರಸ್ಸು ಮಾಡಲಾಗುವುದು.

**ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆ ಅಡಿ ಕಾರ್ಯಕ್ರಮಗಳ ಅನುಷ್ಠಾನ**

2012-13ನೇ ಸಾಲಿನಲ್ಲಿ ರಾಜ್ಯವಲಯದಡಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಗಿರಿಜನ ಉಪಯೋಜನೆಗಳ ಅಡಿಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

1. **ಗ್ರಾಮೀಣ ಪ್ರದೇಶದಲ್ಲಿ ಅಂಬೇಡ್ಕರ್ ಯುವಜನ ಅಭಿವೃದ್ಧಿ ಕೇಂದ್ರ ಸ್ಥಾಪನೆ:** ಈ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಕಾಲೋನಿಯಲ್ಲಿ ಜಿಲ್ಲೆಗೆ 1 ರಂತೆ ಅಂಬೇಡ್ಕರ್ ಯುವಜನ ಅಭಿವೃದ್ಧಿ ಕೇಂದ್ರದ ಸ್ಥಾಪನೆಗೆ ತಲಾ ರೂ.10.00 ಲಕ್ಷಗಳಿಗೆ ಮೀಸಲಿಡಲಾಗಿದೆ. ಅದುದರಿಂದ ಪ್ರತಿ ಜಿಲ್ಲೆಗೆ ಒಂದರಂತೆ ಗ್ರಾಮವನ್ನು ಗುರಿತಿಸಿ ಗ್ರಾಮಪಂಚಾಯತ್ ವತಿಯಿಂದ ನಿವೇಶನ ಪಡೆದು ಇಲಾಖೆಗೆ ಹಸ್ತಾಂತರಿಸಿಕೊಂಡು ಅಂಬೇಡ್ಕರ್ ಯುವಜನ ಅಭಿವೃದ್ಧಿ ಕೇಂದ್ರ ಸ್ಥಾಪಿಸುವುದು.
2. **ಪರಿಶಿಷ್ಟ ಜಾತಿ, ವಿದ್ಯಾ ಸಂಸ್ಥೆಯ ಆಟದ ಮೈದಾನಗಳು ಅಭಿವೃದ್ಧಿ ಪಡಿಸಲು:** ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾ ಸಂಸ್ಥೆಯಲ್ಲಿ ಆಟದ ಮೈದಾನ ಅಭಿವೃದ್ಧಿಪಡಿಸಲು ಜಿಲ್ಲೆ ಒಂದಕ್ಕೆ ರೂ. 5.00 ಲಕ್ಷಗಳ ಅವಕಾಶವಿದ್ದು, ಜಿಲ್ಲೆಯಲ್ಲಿ ಒಂದು ವಿದ್ಯಾ ಸಂಸ್ಥೆಯನ್ನು ಆಯ್ಕೆ ಮಾಡಿ ಆಟದ ಮೈದಾನ ಅಭಿವೃದ್ಧಿ ಪಡಿಸಲಾಗುವುದು.
3. **ಪರಿಶಿಷ್ಟ ಜಾತಿ, ಸಾಂಸ್ಕೃತಿಕ ಹಾಗೂ ಕ್ರೀಡಾ ಸಲಕರಣೆಗಳನ್ನು ಒದಗಿಸಲು:** ಪರಿಶಿಷ್ಟ ಜಾತಿಗೆ ಸೇರಿದ ಸಂಘಗಳಿಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಸಲಕರಣೆಗಳಾದ ವಾಲಿಬಾಲ್, ಫುಟ್‌ಬಾಲ್,

ಅಥ್ಲೆಟಿಕ್, ಮತ್ತಿತರೆ ಸಲಕರಣೆ ಒದಗಿಸಲು ಚಾಲ್ತಿಯಲ್ಲಿರುವ ಸಂಘಗಳ ಆಯ್ಕೆ ಮಾಡಿದ ಪಟ್ಟಿಯನ್ನು ಒದಗಿಸುವುದು. ಸಾಂಸ್ಕೃತಿಕ ಸಲಕರಣೆಗೆ ರೂ.1.00 ಲಕ್ಷಗಳನ್ನು ಹಾಗೂ ಕ್ರೀಡಾ ಸಲಕರಣೆಗಳಿಗೆ ರೂ.1.00 ಲಕ್ಷಗಳನ್ನು ಒದಗಿಸಲಾಗುವುದು.

4. **ರಾಜ್ಯಮಟ್ಟದ ಜಾನಪದ ಕಲಾಮೇಳ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ವಿಭಾಗಮಟ್ಟದಲ್ಲಿ ಹಮ್ಮಿಕೊಳ್ಳುವುದು:** ವಿಭಾಗಮಟ್ಟದಲ್ಲಿ ಜಾನಪದ ಕಲಾಮೇಳವನ್ನು ಪರಿಶಿಷ್ಟ ಜಾತಿ ಜನಾಂಗದವರಿಂದ ಹಮ್ಮಿಕೊಳ್ಳಲು ಬೆಳಗಾಂ, ಗುಲ್ಬರ್ಗಾ, ಮೈಸೂರು ಮತ್ತು ಬೆಂಗಳೂರು ನಗರ ಜಿಲ್ಲೆಗಳಿಂದ ಹಮ್ಮಿಕೊಳ್ಳಲು ಯೋಜಿಸಲಾಗಿದೆ. ಒಟ್ಟಾರೆ ಆಯ್ಕೆ ಮಾಡಿದ ವಿಭಾಗದಲ್ಲಿ ಪರಿಶಿಷ್ಟ ಜಾತಿ ಸೇರಿದ ಜನಾಂಗದವರನ್ನು ತರಬೇತಿ ನೀಡುವುದರ ಮೂಲಕ ಜಿಲ್ಲಾ ಕೇಂದ್ರದಲ್ಲಿ ವಿಭಾಗಮಟ್ಟದ ಜಾನಪದ ಕಲಾಮೇಳವನ್ನು ಹಮ್ಮಿಕೊಳ್ಳಲಾಗುವುದು

5. **ಗಿರಿಜನ ಜಾತಿಗೆ ಸೇರಿದ ಪ್ರತಿಭಾವಂತ ಕ್ರೀಡಾಪಟುಗಳ ಅನ್ವೇಷಣೆ ಮತ್ತು ತರಬೇತಿ ನಡೆಸುವುದು:**
   ಜಿಲ್ಲಾದ್ಯಂತ ಪ್ರತಿಭಾವಂತ ಕ್ರೀಡಾಪಟುಗಳನ್ನು ಅನ್ವೇಷಣೆ ಮಾಡಿ 100 ಮಂದಿ ಕ್ರೀಡಾಪಟುಗಳಿಗೆ 10 ದಿನಗಳು ತರಬೇತಿ ನೀಡಲಾಗುವುದು.

## ಚಿಕ್ಕಮಗಳೂರು ಜಿಲ್ಲೆಯ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತರು

ರಾಷ್ಟ್ರ ಪ್ರಶಸ್ತಿ – ವೈಯಕ್ತಿಕ

1. ***ಶ್ರೀ ಹೆಚ್. ಎಸ್.ಪುಟ್ಟಸ್ವಾಮಿ,*** ನವಚೇತನ ಯುವಕ ಸಂಘ, – 1993–94
   ನವಚೇತನ ಯುವಕ ಸಂಘ, ಹಿರೇಮಗಳೂರು, ಚಿಕ್ಕಮಗಳೂರು ತಾ॥

## ಚಿಕ್ಕಮಗಳೂರು ಜಿಲ್ಲೆಯ ರಾಜ್ಯ ಯುವ ಪ್ರಶಸ್ತಿ ಪುರಸ್ಕೃತರು

ರಾಜ್ಯ ಯುವ ಪ್ರಶಸ್ತಿ – ವೈಯಕ್ತಿಕ

1. ***ಶ್ರೀ ಹೆಚ್.ಎಸ್.ಪುಟ್ಟಸ್ವಾಮಿ,*** ನವಚೇತನ ಯುವಕ ಸಂಘ, – 1987–88
   ಹಿರೇಮಗಳೂರು, ಚಿಕ್ಕಮಗಳೂರು ತಾ॥
2. ***ಶ್ರೀ ಸೋಮಶೇಖರ್***, ಬಸವೇಶ್ವರ ಯುವಕ ಸಂಘ, ಬೇಲೇನಹಳ್ಳಿ, ತರೀಕೆರೆ ತಾ॥ –1990–91
3. ***ಶ್ರೀ ವೀರಭದ್ರಯ್ಯ,*** ಕನ್ನಡ ಯುವಕ ಸಂಘ, ತರೀಕೆರೆ ತಾ॥ – 1994–95
4. ***ಶ್ರೀ ಆರದವಳ್ಳಿ ಮಹೇಶ್***, ಆರದವ'ಳ್ಳಿ, ಚಿಕ್ಕಮಗಳೂರು ತಾ॥ –1995–96
5. ***ಶ್ರೀ ಯು.ಸಿ.ಹರೀಶ್,*** ದುರ್ಗಾಪರಮೇಶ್ವರಿಯುವಕಸಂಘ,ಕುಂಚೂರು, ಕೊಪ್ಪ ತಾ॥ –2001–02
6. ***ಶ್ರೀ ರೇವನಾಥ್***, ನವಚೇತನ ಯುವಕ ಸಂಘ, ಹಿರೇಮಗಳೂರು, ಚಿಕ್ಕಮಗಳೂರು – 2009–10

ರಾಜ್ಯ ಸಾಂಘಿಕ ಯುವ ಪ್ರಶಸ್ತಿ

1. ***ಅಧ್ಯಕ್ಷರು,*** ಕನ್ನಡ ಯುವಕ ಸಂಘ, ತರೀಕೆರೆ ತಾ॥ – 1996–97

## ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಯುವ ಪ್ರಶಸ್ತಿ ಪುರಸ್ಕೃತರು
## (ವೈಯಕ್ತಿಕ ಪ್ರಶಸ್ತಿ)
## 2007–08

1. **ಶ್ರೀ. ಬಿ. ರೇವನಾಥ್,** ನವಚೇತನ ಯುವಕ ಸಂಘ, ಚಿಕ್ಕಮಗಳೂರು ತಾ॥
2. **ಶ್ರೀ. ಜೆ.ಆರ್. ರಾಜಾಶಂಕರ್,** ಅಭಿರಾಮ ಯುವಕ ಸಂಘ, ಕೊಪ್ಪ ತಾ॥
3. **ಶ್ರೀ. ಹೆಚ್.ಸಿ. ಗಂಗಾಧರ್,** ಅಂಬೇಡ್ಕರ್ ಯುವ ಅಭಿವೃದ್ಧಿ, ಚಿಕ್ಕಮಗಳೂರು ತಾ॥

4. **ಶ್ರೀ. ಉಮೇಶ್‌ನಾಯ್ಕ,** ಶ್ರೀ ಭಗವಾನ್ ಸತ್ಯ ಸೇವಾ ಲಾಲ್ ಯುವಕ ಸಂಘ, ತರೀಕೆರೆ ತಾ॥

5. **ಶ್ರೀ. ರತ್ನಾಕರ್**, ಶ್ರೀ ದುರ್ಗಾ ಪರಮೇಶ್ವರಿ ಯುವಕ ಸಂಘ, ಕೊಪ್ಪ ತಾ।

## 2008–09

1. **ಶ್ರೀ. ಡಿ.ಎನ್. ಕೇಶವಮೂರ್ತಿ,** ಶ್ರೀ ಸಿದ್ದಿವಿನಾಯಕ ಯುವಕ ಸಂಘ, ನ.ರಾ ಪುರ ತಾ॥.
2. **ಶ್ರೀ. ಪಿ. ವಿಶ್ವಕುಮಾರ್,** ಸಚೇತನ ಯುವಕ ಸಂಘ, ಮೂಡಿಗೆರೆ ತಾ॥
3. **ಶ್ರೀ ಕೆ.ಲೊಕೇಶ್,** ಶ್ರೀ ಚೌಡೇಶ್ವರಿ ಹವ್ಯಾಸಿ ಕಲಾಯುವಕ ಸಂಘ, ಕಡೂರು ತಾ॥
4. **ಶ್ರೀ. ಇಮ್ರಾನ್ ಅಹ್ಮದ್ ಬೇಗ್,** ತರೀಕೆರೆ ತಾ॥

## 2009–10

1. **ಶ್ರೀ. ಪುಷ್ಪರಾಜು,** ಅಂಬೇಡ್ಕರ್ ಯುವ ಅಭಿವೃದ್ಧಿ ಸಂಘ, ಹಿರೇಮಗಳೂರು, ಚಿಕ್ಕಮಗಳೂರು ತಾ॥
2. **ಶ್ರೀ. ಎಲ್. ಪ್ರವೀಣ್,** ಸ್ಫೂರ್ತಿ ಯುವಕ ಸಂಘ, ತಣೀಬೈಲು, ತರೀಕೆರೆ ತಾ॥
3. **ಶ್ರೀ. ಹೆಚ್.ಎಂ ಕುಮಾರ್,** ರಮಿರಂಗ ಅಭಿನಯ ಯುವಕ ಸಂಘ, ಚಿಕ್ಕಮಗಳೂರು ತಾ॥
4. **ಶ್ರೀ. ಶಹಬುದ್ದಿನ್,** ಮಾತೃಭೂಮಿ ಯುವಕ ಸಂಘ, ಚಿಕ್ಕಮಗಳೂರು ತಾ॥
5. **ಶ್ರೀ. ಬಿ.ಜಿ ವಿಶ್ವನಾಥಯ್ಯ,** ಶ್ರೀ ವೀರನಾರಾಯಣ ಯುವಕ ಸಂಘ, ಚಿಕ್ಕಮಗಳೂರು ತಾ॥

## 2010–11

1. **ಶ್ರೀ ಹೆಚ್ ಎಸ್ ಜಗದೀಶ್**, ನವಚೇತನ ಯುವಕ ಸಂಘ, ಹಿರೇಮಗಳೂರು, ಚಿಕ್ಕಮಗಳೂರು
2. **ಕು॥ ಪುಷ್ಪಾಲತಾ ಕೆ.ಆರ್,** ಸವಿತ ಯುವತಿ ಮಂಡಳಿ, ಕೂದುವಳ್ಳಿ, ಚಿಕ್ಕಮಗಳೂರು

## 2011–12

1. **ಶ್ರೀ ದಯಾನಂದ ಸರಸ್ವತಿ,** ಶ್ರೀ ಕಲ್ಲೇಶ್ವರ ಕೃಪಾ ಪೋಷಿತ ಹವ್ಯಾಸಿ ಕಲಾ ಸಂಘ, ಸಿಂಗಟಗೆರೆ, ಕಡೂರು ತಾ॥
2. **ಶ್ರೀಮತಿ ರಂಗಿಣಿ ಯು ರಾವ್**, ಸೀತಾ ಸೇವಾ ಮಂಡಳಿ, ಸೀತೂರು, ನ.ರಾ.ಪುರ ತಾ॥

## 2012–13

1. **ಶ್ರೀ ಹೆಚ್.ಎಸ್ ಗಿರೀಶ್,** ಕಲಾ ಜ್ಯೋತಿ ಯುವಕ ಸಂಘ, ಹೆಸಗಲ್, ಮೂಡಿಗೆರೆ ತಾ॥
2. **ಶೃತಿ ಎಂ.ವಿ,** ಶ್ರೀ ದುರ್ಗಾ ಯುವತಿ ಮಂಡಳಿ, ಬಲಗಾರು, ಬೇರುಕೂಡಿಗೆ, ಕೊಪ್ಪ ತಾ॥
3. **ಶ್ರೀ ಬಿ.ಟಿ ಮಂಜುನಾಥ,** ಮಿತ್ರ ಜಾನಪದ ಕಲಾ ಸಂಘ, ಮೂಡಿಗೆರೆ ತಾ॥
4. **ಶ್ರೀ ಮಂಜುನಾಥ ಕೆ.ಎನ್,** ಗುರುಸಿದ್ದರಾಮೇಶ್ವರ ಯುವಕ ಸಂಘ, ತರೀಕೆರೆ ತಾ॥

# ಸಾಂಘಿಕ ಪ್ರಶಸ್ತಿ

## 2007–08

1. **ಅಧ್ಯಕ್ಷರು,** ಶ್ರೀ ಸ್ಫೂರ್ತಿ ಯುವಕ ಸಂಘ, ತರೀಕೆರೆ ತಾ॥
2. **ಅಧ್ಯಕ್ಷರು,** ಕಲಾಜ್ಯೋತಿ ಯುವಕ ಸಂಘ, ಮೂಡಿಗೆರೆ ತಾ।

## 2008–09

1. **ಅಧ್ಯಕ್ಷರು,** ಶ್ರೀ. ಭಗವಾನ್ ಸತ್ಯ ಸೇವಾಲಾಲ್ ಯುವಕ ಸಂಘ, ಕರಡಿಪುರ, ತರೀಕೆರೆ ತಾ॥
2. **ಅಧ್ಯಕ್ಷರು,** ಸಚೇತನ ಯುವಕ ಸಂಘ, ಮೂಡಿಗೆರೆ ತಾ॥

## 2009–10

1. **ಅಧ್ಯಕ್ಷರು,** ಭಾಗ್ಯಶ್ರೀ ಯುವತಿ ಮಂಡಳಿ, ಕಡೂರು ತಾ॥
2. **ಅಧ್ಯಕ್ಷರು,** ಶ್ರೀ ಚೌಡೇಶ್ವರಿ ಕೃಪಾ ಪೋಷಿತ ಹವ್ಯಾಸಿ ಯುವಕ ಕಲಾಸಂಘ, ಕಡೂರು ತಾ॥

## 2010–11

1. **ಅಧ್ಯಕ್ಷರು,** ರಮಿರಂಗ ಪ್ರಯೋಗ, ಮಾರ್ಕೆಟ್ ರಸ್ತೆ, ಚಿಕ್ಕಮಗಳೂರು

## 2011–12

1. **ಅಧ್ಯಕ್ಷರು,** ಚೈತನ್ಯ ಯುವಕ ಸಂಘ, ಟಿ.ಬಿ ರಸ್ತೆ, ನ.ರಾಪುರ ತಾ॥

## 2012–13

1. **ಅಧ್ಯಕ್ಷರು,** ಯುವಶಕ್ತಿ ಮಾನವತಾ ವೇದಿಕೆ, ಅಂಬೇಡ್ಕರ್ ರಸ್ತೆ, ಚಿಕ್ಕಮಗಳೂರು
2. **ಅಧ್ಯಕ್ಷರು,** ಸವಿತ ಯುವತಿ ಮಂಡಳಿ, ಕೂದುವಳ್ಳಿ, ಚಿಕ್ಕಮಗಳೂರು

## ರಾಷ್ಟ್ರೀಯ ಯುವ ಪ್ರಶಸ್ತಿಗಳು

ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸಿದ ಯುವಜನ ಸಂಸ್ಥೆಗಳು ಮತ್ತು ಯುವಜನರನ್ನು ಗುರುತಿಸಿ ಭಾರತ ಸರ್ಕಾರ ರಾಷ್ಟ್ರೀಯ ಯುವ ಪ್ರಶಸ್ತಿಗಳನ್ನು ನೀಡಿ ಗೌರವಿಸುತ್ತದೆ. ಸೂಕ್ತವಾದ ಪ್ರಚಾರ ನೀಡಿ, ಪ್ರಸ್ತಾವನೆಗಳನ್ನು ಆಹ್ವಾನಿಸಿ, ರಾಷ್ಟ್ರೀಯ ಯುವ ಪ್ರಶಸ್ತಿಗೆ ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಲಾಗುವುದು.

## ಜಿಲ್ಲಾ ಕ್ರೀಡಾ ಪ್ರಶಸ್ತಿ

ಕ್ರೀಡೆಯಲ್ಲಿ ಉತ್ತಮ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ರೂ.5000-00 ಗಳ ನಗದು ಬಹುಮಾನವನ್ನು ನೀಡಲಾಗುತ್ತಿದೆ.

### 2010-11

1. ಯಶವಂತ ಎಂ.ಎನ್ ಬಿನ್ ನಾಗೇಶ್ ಗೌಡ, ಚಿಕ್ಕಮಗಳೂರು – ಈಜು
2. ಹೀನಾ ಕೌಸರ್ ಬಿ ಬಿನ್ ಹೆಚ್ ಎ ಬಾಬು, ಚಿಕ್ಕಮಗಳೂರು – ಪವರ್ ಲಿಫ್ಟಿಂಗ್
3. ಚೇತನ್ ಕೆ.ಎನ್ ಬಿನ್ ನಂಜುಂಡಪ್ಪ, ಕಡೂರು ತಾ॥ – ಬಾಡಿ ಬಿಲ್ಡಿಂಗ್
4. ಪ್ರತೀಕ್ಷಾ ಎಸ್.ಆರ್, ಆಲ್ದೂರು, ಚಿಕ್ಕಮಗಳೂರು – ಅಥ್ಲೆಟಿಕ್ಸ್
5. ವಿಲ್ಮಾ ಡಿಸೋಜ ಬಿನ್ ವಿನ್ಸಿ ಡಿಸೋಜ, ಚಿಕ್ಕಮಗಳೂರು – ಅಥ್ಲೆಟಿಕ್ಸ್
6. ಅಭಿಷೇಕ್ ಹೆಚ್.ಎಸ್, ಚಿಕ್ಕಮಗಳೂರು – ಅಥ್ಲೆಟಿಕ್ಸ್
7. ಮನೋಹರ ಸಿ.ಇ, ಚಿಕ್ಕಮಗಳೂರು – ಅಥ್ಲೆಟಿಕ್ಸ್
8. ರಾಕೇಶ್, ಚಿಕ್ಕಮಗಳೂರು – ಅಥ್ಲೆಟಿಕ್ಸ್
9. ಬಿ.ಕಾವ್ಯ, ತರೀಕೆರೆ ತಾ॥ – ಯೋಗ
10. ಬಿ.ಜಿ ಸೌಮ್ಯಶ್ರೀ, ಕಡೂರು ತಾ॥ – ಯೋಗ

### 2011-12

1. ಮಾಧುರಿ.ಪಿ, ಚಿಕ್ಕಮಗಳೂರು – ಅಥ್ಲೆಟಿಕ್ಸ್
2. ನೂತನ್ ಕುಮಾರ್, ಚಿಕ್ಕಮಗಳೂರು – ಅಥ್ಲೆಟಿಕ್ಸ್
3. ಶೈಲಾ ಸಿ.ಎಂ, ಚಿಕ್ಕಮಗಳೂರು – ಅಥ್ಲೆಟಿಕ್ಸ್
4. ಜಯಲಕ್ಷ್ಮಿ, ಚಿಕ್ಕಮಗಳೂರು – ಅಥ್ಲೆಟಿಕ್ಸ್
5. ಅನುಪ್ ಹೆಚ್ ಎಸ್, ಚಿಕ್ಕಮಗಳೂರು– ಅಥ್ಲೆಟಿಕ್ಸ್
6. ಶರತ್ ಎಂ.ಎಸ್, ಚಿಕ್ಕಮಗಳೂರು– ಅಥ್ಲೆಟಿಕ್ಸ್
7. ರಾಶಿ ಎ.ಎಲ್, ಚಿಕ್ಕಮಗಳೂರು– ಅಥ್ಲೆಟಿಕ್ಸ್
8. ಸಂಜುಬಾಯಿ, ಚಿಕ್ಕಮಗಳೂರು– ಅಥ್ಲೆಟಿಕ್ಸ್
9. ಕವಿತ ಎಸ್, ಚಿಕ್ಕಮಗಳೂರು– ಅಥ್ಲೆಟಿಕ್ಸ್
10. ನವೀನ ಎನ್.ಎಂ, ಚಿಕ್ಕಮಗಳೂರು– ಅಥ್ಲೆಟಿಕ್ಸ್

### 2012-13

1. ಶವಾದ್ ಜೆ.ಎಂ, ಚಿಕ್ಕಮಗಳೂರು– ಅಥ್ಲೆಟಿಕ್ಸ್
2. ಸೌಮ್ಯ ಎಂ.ಎನ್, ಚಿಕ್ಕಮಗಳೂರು – ಅಥ್ಲೆಟಿಕ್ಸ್
3. ಮಾನಸ ಎನ್.ಕೆ, ಕಡೂರು, ಚಿಕ್ಕಮಗಳೂರು – ಅಥ್ಲೆಟಿಕ್ಸ್
4. ರಕ್ಷಿತ ಬಿ.ಎನ್, ಕೊಪ್ಪ ತಾ॥, ಚಿಕ್ಕಮಗಳೂರು – ಅಥ್ಲೆಟಿಕ್ಸ್
5. ಪೃಥ್ವಿ ಐ.ಎಂ, ಇಂದಾವರ, ಚಿಕ್ಕಮಗಳೂರು – ಟೇಕ್ವಾಂಡೋ
6. ನವಮಿ, ಮೂಗ್ತಿಹಳ್ಳಿ, ಚಿಕ್ಕಮಗಳೂರು – ಅಥ್ಲೆಟಿಕ್ಸ್
7. ಮೊಹಮ್ಮದ್ ಸುಹೈಲ್ ಬಿ.ಹೆಚ್, ಕೊಪ್ಪ ತಾ॥, ಚಿಕ್ಕಮಗಳೂರು – ವಾಲಿಬಾಲ್
8. ವಂದನ ಎಂ.ಸಿ, ಕೆಂಪನಹಳ್ಳಿ, ಚಿಕ್ಕಮಗಳೂರು – ಅಥ್ಲೆಟಿಕ್ಸ್
9. ಕೀರ್ತಿ ಕೆ, ಮಾಗುಂಡಿ, ನ.ರಾ.ಪುರ ತಾ॥, ಚಿಕ್ಕಮಗಳೂರು – ಅಥ್ಲೆಟಿಕ್ಸ್
10. ರಶ್ಮಿತ ಜೆ, ನೇಕಾರ ಬೀದಿ. ಚಿಕ್ಕಮಗಳೂರು– ಟೇಕ್ವಾಂಡೋ

## ತಾಲ್ಲೂಕು ಕ್ರೀಡಾಂಗಣಗಳು

ಕ್ರೀಡಾ ಚಟುವಟಿಕೆಗಳ ಕೇಂದ್ರ ಬಿಂದು ಕ್ರೀಡಾಂಗಣಗಳು, ಗ್ರಾಮೀಣ ಪ್ರದೇಶದಲ್ಲಿ ಕ್ರೀಡಾ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಅಗತ್ಯ ಕ್ರೀಡಾ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕೆ ಪ್ರಾಶಸ್ತ್ಯ ನೀಡಲಾಗುತ್ತಿದೆ.

ತಾಲ್ಲೂಕು ಮತ್ತು ಜಿಲ್ಲಾ ಕ್ರೀಡಾಂಗಣ ನಿರ್ಮಾಣ ಮತ್ತು ನಿರ್ವಹಣೆಯನ್ನು ಸಮಿತಿಯ ತೀರ್ಮಾನದ ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು, ನರಸಿಂಹರಾಜಪುರ, ಮೂಡಿಗೆರೆ ತಾಲ್ಲೂಕುಗಳಲ್ಲಿ ತಾಲ್ಲೂಕು ಕ್ರೀಡಾಂಗಣ ನಿರ್ಮಾಣಗೊಂಡಿರುತ್ತದೆ. ಉಳಿದಂತೆ ಶೃಂಗೇರಿ, ಕೊಪ್ಪ, ತರೀಕೆರೆ ತಾಲ್ಲೂಕುಗಳಲ್ಲಿ ಕ್ರೀಡಾಂಗಣವನ್ನು ನಿರ್ಮಿಸಬೇಕಾಗಿದೆ.

ಜಿಲ್ಲಾ ಕೇಂದ್ರ ಸ್ಥಾನವಾದ ಚಿಕ್ಕಮಗಳೂರಿನಲ್ಲಿ ಉತ್ತಮ ಮಟ್ಟದ ಕ್ರೀಡಾ ಮೂಲಭೂತ ಸೌಕರ್ಯ ಸೃಷ್ಟಿಸುವ ದಿಕ್ಕಿನಲ್ಲಿ 14.15 ಎಕರೆ ವಿಸ್ತೀರ್ಣದಲ್ಲಿ ಜಿಲ್ಲಾ ಕ್ರೀಡಾಂಗಣ ಸಮಿತಿಯಿಂದ, ರೂ.46.80 ಲಕ್ಷಗಳ ವೆಚ್ಚದಲ್ಲಿ ವಿವಿದೋದ್ದೇಶಗಳ ಕ್ರೀಡಾಂಗಣವನ್ನು ನಿರ್ಮಿಸಲಾಗಿದೆ. ಈ ಕ್ರೀಡಾಂಗಣದಲ್ಲಿ, ಪೆವಿಲಿಯನ್ ಕಟ್ಟಡ, 400 ಮೀ ಸಿಂಡರ್ ಟ್ರ್ಯಾಕ್, ಬಾಕ್ ಚರಂಡಿ, ಬ್ಯಾಸ್ಕೆಟ್‌ಬಾಲ್ ಅಂಕಣ, ಪ್ರೇಕ್ಷಕರ ಗ್ಯಾಲರಿ, ವಾಲಿಬಾಲ್ ಅಂಕಣ, ಖೋಖೋ ಅಂಕಣ, ಟೆನ್ನಿಸ್ ಕೋರ್ಟ್, ಕ್ರೀಡಾಶಾಲೆ, ಈಜುಕೊಳ, ಒಳಾಂಗಣ ಕ್ರೀಡಾಂಗಣ ಇದೆ

## ಸಂಕಷ್ಟದಲ್ಲಿರುವ ಕ್ರೀಡಾಪಟುಗಳಿಗೆ ಆರ್ಥಿಕ ನೆರವು

ರಾಜ್ಯಮಟ್ಟದ, ರಾಷ್ಟ್ರಮಟ್ಟದ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ವಿಶೇಷ ಸಾಧನೆಗೈದು, ಪ್ರಸ್ತುತ ಸಂಕಷ್ಟ ಪರಿಸ್ಥಿತಿಯಲ್ಲಿರುವ 50 ವರ್ಷಕ್ಕೆ ಮೀರಿದ ಕುಸ್ತಿ/ಕ್ರೀಡಾಪಟುಗಳಿಗೆ ಇಲಾಖೆಯಿಂದ ಆರ್ಥಿಕ ನೆರವನ್ನು ನೀಡಲಾಗುತ್ತಿದೆ.

ಅ) ರಾಜ್ಯಮಟ್ಟದಲ್ಲಿ ವಿಶೇಷ ಸಾಧನೆಗೈದವರಿಗೆ ಪ್ರತಿ ಮಾಹೆ ರೂ. 750–00

ಆ) ರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆಗೈದವರಿಗೆ ಪ್ರತಿ ಮಾಹೆ ರೂ. 1000–00

ಇ) ಅಂತರ ರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆಗೈದವರಿಗೆ ರೂ. 1500–00

2012–13 ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ 85 ಕುಸ್ತಿಪಟುಗಳಿಗೆ ಮಾಹೆಯಾನ ತಲಾ ರೂ.750/– ಗಳಂತೆ ಮಾಸಾಶನ ನೀಡಲಾಗುತ್ತಿದೆ.

## ಕ್ರೀಡಾ ತರಬೇತಿ ಕಾರ್ಯಕ್ರಮಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕರ್ನಾಟಕ ಪ್ರಾಧಿಕಾರ ತರಬೇತುದಾರರು ವಾಲಿಬಾಲ್ ಕ್ರೀಡೆಯಲ್ಲಿ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ಅಗತ್ಯವಾದ ಕ್ರೀಡಾ ತರಬೇತಿಯನ್ನು ನೀಡುವರು. ಭರವಸೆದಾಯಕ ಕ್ರೀಡಾಪಟುಗಳಿಗೆ ಹೆಚ್ಚಿನ ಮಟ್ಟದ ತರಬೇತಿಯನ್ನು ನೀಡಲಾಗುವುದು. ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

## ಪೈಕಾ ಗ್ರಾಮೀಣ ಕ್ರೀಡಾಕೂಟಗಳು

ಗ್ರಾಮೀಣ ಕ್ಷೇತ್ರದಲ್ಲಿನ ಕ್ರೀಡಾ ಪ್ರತಿಭೆಗಳನ್ನು ಗುರುತಿಸಲು ಮತ್ತು ಅವರು ಜಿಲ್ಲಾ ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವಂತಾಗಲು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯು ಪ್ರತಿವರ್ಷ ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಗ್ರಾಮೀಣ ಕ್ರೀಡಾಕೂಟಗಳನ್ನು ಏರ್ಪಡಿಸುತ್ತಿದೆ. ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಉತ್ತಮ ಸಾಧನೆ ತೋರಿದ ಕ್ರೀಡಾಪಟುಗಳನ್ನು ರಾಜ್ಯಮಟ್ಟದ ಗ್ರಾಮೀಣ ಕ್ರೀಡಾಕೂಟಕ್ಕೆ ಕಳುಹಿಸಿಕೊಡಲಾಗುವುದು. ರಾಜ್ಯಮಟ್ಟದಲ್ಲಿ ವಿಜೇತರಾದವರನ್ನು ರಾಷ್ಟ್ರಮಟ್ಟಕ್ಕೆ ಕಳುಹಿಸಲಾಗುವುದು.

ಅತಿ ಹೆಚ್ಚಿನ ಅಂಕ ಗಳಿಸಿದ ಗ್ರಾಮಪಂಚಾಯಿತಿ ಮತ್ತು ಬ್ಲಾಕ್ ಪಂಚಾಯಿತಿಗಳಿಗೆ ನಗದು ಬಹುಮಾನವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ. ತಾಲ್ಲೂಕು ಮತ್ತು ಗ್ರಾಮಪಂಚಾಯಿತಿಗಳು ಬಹುಮಾನದ ಮೊತ್ತವನ್ನು ಕ್ರೀಡಾಪಟುಗಳಿಗೆ ಬಹುಮಾನವಾಗಿ ನೀಡಲಾಗುತ್ತಿದೆ.

## ದಸರಾ ಕ್ರೀಡಾಕೂಟ

ಕರ್ನಾಟಕದ ಹೆಮ್ಮೆಯ ದಸರಾ ಉತ್ಸವದ ಕಾಲದಲ್ಲಿ ಕ್ರೀಡಾ ಪ್ರತಿಭೆಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ ಇಲಾಖೆಯ ವತಿಯಿಂದ ಪ್ರತಿವರ್ಷ ತಾಲ್ಲೂಕು, ಜಿಲ್ಲಾ ಮತ್ತು ಹಂಚಿಕೆಯಾದಲ್ಲಿ ವಿಭಾಗಮಟ್ಟದ ದಸರಾ ಕ್ರೀಡಾಕೂಟವನ್ನು ಸಂಘಟಿಸಲಾಗುವುದು. ತಾಲ್ಲೂಕುಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದವರನ್ನು ಜಿಲ್ಲಾ ಮಟ್ಟಕ್ಕೂ ಮತ್ತು ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಆಯ್ಕೆಯಾದ ಕ್ರೀಡಾಪಟುಗಳನ್ನು ವಿಭಾಗ ಮಟ್ಟದ ಸ್ಪರ್ಧೆಗಳಲ್ಲಿ ಮತ್ತು ವಿಭಾಗ ಮಟ್ಟದಲ್ಲಿ ವಿಜೇತರಾದವರು ಮೈಸೂರಿನಲ್ಲಿ ನಡೆಯುವ ರಾಜ್ಯಮಟ್ಟದ ದಸರಾ ಕ್ರೀಡಾಕೂಟದಲ್ಲಿ ಭಾಗವಹಿಸಿ ತಮ್ಮ ಪತ್ರಿಭೆಯನ್ನು ಪ್ರದರ್ಶಿಸುವರು.

ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಸಂಘಟನೆಗೆ ಕರ್ನಾಟಕ ಕ್ರೀಡಾಪ್ರಾಧಿಕಾರ ಮತ್ತು ಜಿಲ್ಲಾ ಪಂಚಾಯಿತಿಯಿಂದ ಒದಗಿಸುವ ಅನುದಾನದಿಂದ ಸಂಘಟಿಸಲಾಗುವುದು.

## ಮಹಿಳಾ ಕ್ರೀಡಾ ಕೂಟ

ಮಹಿಳಾ ಕ್ರೀಡಾ ಪ್ರತಿಭೆಗಳನ್ನು ಪರಿಚಯ ಮಾಡಿಕೊಡುವ ಉದ್ದೇಶದಿಂದ, ಇಲಾಖೆಯ ವತಿಯಿಂದ 2011–12 ನೇ ಸಾಲಿನಿಂದ ತಾಲೂಕು, ಜಿಲ್ಲಾ ಮತ್ತು ರಾಜ್ಯಮಟ್ಟದ ಮಹಿಳಾ ಕ್ರೀಡಾಕೂಟವನ್ನು ಸಂಘಟಿ ಸಲಾಗಿದೆ. ತಾಲೂಕು ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದವರನ್ನು ಜಿಲ್ಲಾಮಟ್ಟಕ್ಕೂ ಮತ್ತು ಜಿಲ್ಲಾಮಟ್ಟದ ಸ್ಪರ್ಧೆಗಳಲ್ಲಿ ಆಯ್ಕೆಯಾದ ಕ್ರೀಡಾಪಟುಗಳನ್ನು ರಾಜ್ಯಮಟ್ಟದ ಸ್ಪರ್ಧೆಗಳಿಗೆ ನಿಯೋಜಿಸಲಾಗುವುದು. ಜಿಲ್ಲಾ ಮಟ್ಟದ ಸ್ಫರ್ಧೆಗಳನ್ನು ಏರ್ಪಡಿಸಲು ಅನುದಾನವನ್ನು ಇಲಾಖೆಯಿಂದ ಬಿಡುಗಡೆ ಮಾಡಲಾಗುವುದು.

## ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಲ್ಲಿ ಕ್ರೀಡಾ ಮನೋಭಾವ ಬೆಳೆಸಲು ಇಲಾಖೆಯು ಜಿಲ್ಲಾಮಟ್ಟದಲ್ಲಿ ಸರ್ಕಾರಿ ನೌಕರರ ಕ್ರೀಡಾಕೂಟಗಳನ್ನು ಏರ್ಪಡಿಸುತ್ತಿದೆ. ಹಾಗೂ ರಾಜ್ಯಮಟ್ಟದ ಸರ್ಕಾರಿ ನೌಕರರ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳನ್ನು ಸಹ ಕಳುಹಿಸಲಾಗುವುದು.

ಕ್ರೀಡೆಗಳಲ್ಲಿ ವಿಶೇಷ ಆಸಕ್ತಿಯಿರುವ ಸರ್ಕಾರಿ ನೌಕರರಿಗೆ ಇದರಿಂದ ಪ್ರೋತ್ಸಾಹ ದೊರಕುವುದಲ್ಲದೆ ಸರ್ಕಾರಿ ನೌಕರಿಗೆ ಸೇರಿದ ನಂತರ ಕ್ರೀಡೆಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳಲು ಉತ್ತಮ ಅವಕಾಶ ದೊರಕಿದಂತಾಗುವುದು.

## ಏಕಲವ್ಯ ಪ್ರಶಸ್ತಿ

ಚಿಕ್ಕಮಗಳೂರು ಜಿಲ್ಲೆ ಮತ್ತು ಕರ್ನಾಟಕ ರಾಜ್ಯವನ್ನು ರಾಷ್ಟ್ರ ಮತ್ತು ಅಂತರ ರಾಷ್ಟ್ರ ಮಟ್ಟದಲ್ಲಿ ಪ್ರತಿನಿಧಿಸಿ, ವಿಶೇಷ ಸಾಧನೆಗೈದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿಯನ್ನು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಿಂದ ನೀಡಿ ಪ್ರೋತ್ಸಾಹಿಸಲಾಗುವುದು. ಕ್ರೀಡಾಪಟುಗಳ ಪ್ರಸ್ತಾವನೆಯನ್ನು ರಾಜ್ಯ ಮಟ್ಟಕ್ಕೆ ಸಲ್ಲಿಸಲಾಗುವುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಕು॥ ಅಕ್ಷತಾ ಎ.ಕೆ ಅವರಿಗೆ 2008–09ನೇ ಸಾಲಿನಲ್ಲಿ ಏಕಲವ್ಯ ಪ್ರಶಸ್ತಿಯನ್ನು ನೀಡಲಾಗಿದೆ. ಈ ಪ್ರಶಸ್ತಿಯು

ನಗದು ಬಹುಮಾನ ರೂ. 50,000-00, ಏಕಲವ್ಯ ಕಂಚಿನ ಪ್ರತಿಮೆ ಮತ್ತು ಗೌರವ ಪತ್ರಗಳನ್ನು ಒಳಗೊಂಡಿರುತ್ತದೆ.

## ಅರ್ಜುನ ಪ್ರಶಸ್ತಿ

ಕ್ರೀಡಾ ಕ್ಷೇತ್ರಕ್ಕೆ ಭಾರತ ಸರ್ಕಾರವು ಪ್ರಧಾನ ಮಾಡುತ್ತಿರುವ ವಿಶಿಷ್ಟ ಪ್ರಶಸ್ತಿ ಅರ್ಜುನ ಪ್ರಶಸ್ತಿ. ಪ್ರಶಸ್ತಿಯ ವರ್ಷವೂ ಸೇರಿದಂತೆ ಹಿಂದಿನ ಮೂರು ವರ್ಷಗಳಲ್ಲಿ ರಾಷ್ಟ್ರ ಮಟ್ಟದ ಅಥವಾ ಅಂತರ ರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದ ಕ್ರೀಡಾಪಟುಗಳು ನಾಯಕತ್ವ ಗುಣಗಳನ್ನು ಹಾಗೂ ಶಿಸ್ತು ಪ್ರಜ್ಞೆಯನ್ನು ಹೊಂದಿರುವುದನ್ನು ಗುರುತಿಸಿ, ಈ ಪ್ರಶಸ್ತಿಗೆ ಅರ್ಹರಾದವರನ್ನು ಇಲಾಖೆಯ ವತಿಯಿಂದ ಶಿಫಾರಸ್ಸು ಮಾಡಲಾಗುವುದು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಂತಹ ಕ್ರೀಡಾಪಟುಗಳಿದ್ದಲ್ಲಿ, ಅಂಥಹವರ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗುವುದು.

## ದ್ರೋಣಾಚಾರ್ಯ ಪ್ರಶಸ್ತಿ

ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ಕ್ರೀಡಾ ಸ್ಪರ್ಧೆಗಳಲ್ಲಿ ಉತ್ತಮ ಕ್ರೀಡಾ ಪ್ರತಿಭೆಯನ್ನು ತೋರುವ ಕ್ರೀಡಾ ಪಟುಗಳನ್ನು/ಕ್ರೀಡಾ ತಂಡವನ್ನು ತರಬೇತುಗೊಳಿಸಿದ ಕ್ರೀಡಾ ತರಬೇತುದಾರರಿಗೆ ಭಾರತ ಸರ್ಕಾರದ ವತಿಯಿಂದ ಈ ಪ್ರಶಸ್ತಿಯನ್ನು ನೀಡಲಾಗುವುದು.

ಇಂಥ ಸಾಧನೆಗೈದ ಕ್ರೀಡಾ ತರಬೇತುದಾರರನ್ನು ಗುರುತಿಸಿ, ಅವರನ್ನು ಪ್ರಶಸ್ತಿಗಾಗಿ ಕೇಂದ್ರ ಸರ್ಕಾರಕ್ಕೆ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಶಿಫಾರಸ್ಸು ಮಾಡಲಾಗುವುದು. ಇಂತಹ ತರಬೇತು ದಾರರು ಜಿಲ್ಲೆಯಲ್ಲಿದ್ದಲ್ಲಿ, ಅಂತಹವರ ಪ್ರಸ್ತಾವನೆಯನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗುವುದು.

## ರಾಜೀವ್ ಗಾಂಧಿ ಖೇಲ್ ರತನ್ ಪ್ರಶಸ್ತಿ

ಭಾರತ ಸರ್ಕಾರವು 1991-92 ರಿಂದ ಈ ಪ್ರಶಸ್ತಿಯನ್ನು ನೀಡಲಾರಂಭಿಸಿದೆ. ಒಂದು ವರ್ಷದ ಅವಧಿಯಲ್ಲಿ ಕ್ರೀಡಾಪಟು ಅಥವಾ ಕ್ರೀಡಾ ತಂಡ ತೋರಿದ ಅತಿ ವಿಶಿಷ್ಟ ಹಾಗೂ ಗಮನಾರ್ಹ ಸಾಧನೆಯನ್ನು ಪರಿಗಣಿಸಿ, ಈ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು. ಪದಕ, ಗೌರವಪತ್ರ ಹಾಗೂ 3.00 ಲಕ್ಷ ರೂ. ನಗದನ್ನು ಪ್ರಶಸ್ತಿ ಒಳಗೊಂಡಿದೆ. ಇಂತಹ ಪ್ರಶಸ್ತಿಗೆ ಅರ್ಹ ಕ್ರೀಡಾ ಪಟುಗಳು ಅಥವಾ ಕ್ರೀಡಾ ತಂಡವಿದ್ದಲ್ಲಿ, ಅಂತಹವರ ಪ್ರಸ್ತಾವನೆಯನ್ನು ರಾಜ್ಯ ಮಟ್ಟಕ್ಕೆ ಕಳುಹಿಸಲಾಗುವುದು.

## ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನ

ಮಾಧ್ಯಮಿಕ/ಪ್ರೌಢಶಾಲಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಪಡೆದಿದ್ದರೆ, ಆಂಥವರಿಗೆ ಪ್ರೋತ್ಸಾಹ ಮತ್ತು ಉತ್ತೇಜನ ನೀಡಲು ಇಲಾಖೆಯ ವತಿಯಿಂದ ವಾರ್ಷಿಕ ರೂ. 1000-00 ಗಳ ಪ್ರೋತ್ಸಾಹಿತ ಕ್ರೀಡಾ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಅರ್ಹರಾದ ವರು ತಮ್ಮ ಪ್ರಸ್ತಾವನೆಯನ್ನು ನಿಗದಿ ಪಡಿಸಿದ ನಮೂನೆಯಲ್ಲಿ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಿದಲ್ಲಿ, ಅರ್ಜಿಗಳನ್ನು ಕ್ರೋಢೀಕರಿಸಿ, ರಾಜ್ಯ ಮಟ್ಟಕ್ಕೆ ಮಂಜೂರಾತಿಗೆ ಕಳುಹಿಸಲಾಗುವುದು.

## ವೃತ್ತಿ ಶಿಕ್ಷಣ ಪ್ರವೇಶದಲ್ಲಿ ಕ್ರೀಡಾ ಮೀಸಲಾತಿ

ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಲ್ಲಿ ಪದಕ ಗಳಿಸಿ ಸಾಧನೆಗೈದ ಕ್ರೀಡಾಪಟುಗಳು ವೈದ್ಯಕೀಯ, ಇಂಜಿನಿಯರಿಂಗ್, ದಂತ ವೈದ್ಯಕೀಯ ಮತ್ತು ಇತರ ವೃತ್ತಿಪರ ಕೋರ್ಸುಗಳಿಗೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸಿದ್ದರೆ ಅಂಥವರ ಕ್ರೀಡಾ ಸಾಧನೆಯ ಆಧಾರದ ಮೇಲೆ ಅವರಿಗೆ ಸೀಟು ಹಂಚಿಕೆ ಮಾಡಲು ಇಲಾಖೆಯಿಂದ ಸಾಮಾನ್ಯ ಪ್ರವೇಶ ಪರೀಕ್ಷಾ ಘಟಕದ ವಿಶೇಷಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು.

## ನಿವೇಶನ ಹಂಚಿಕೆಯಲ್ಲಿ ಕ್ರೀಡಾ ಮೀಸಲಾತಿ

ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಅತ್ಯುನ್ನತ ಸಾಧನೆಗೈದು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿದ ಕ್ರೀಡಾಪಟುಗಳ ಹೆಸರುಗಳನ್ನು ಇಲಾಖೆಯ ಸಂಬಂಧಪಟ್ಟ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು.

## ರಾಜೀವ್‌ಗಾಂಧಿ ಯುವಶಕ್ತಿ ಸಂಘ ಯೋಜನೆ

ಯುವಜನರಲ್ಲಿ ಅಡಗಿರುವ ಅಧಮ್ಯ ಚೇತನವನ್ನು ಒಗ್ಗೂಡಿಸಿ ಕ್ರೀಡಾ, ಸಂಸ್ಕೃತಿ ಮತ್ತು ಸಮುದಾಯ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿರುವ ಉದ್ದೇಶದಿಂದ 'ರಾಜೀವ್‌ಗಾಂಧಿ ಯುವಶಕ್ತಿ ಸಂಘ' ಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಚಿಸಲಾಗಿದೆ.

ಯುವಕ ಸಂಘಗಳು ಕ್ರೀಡೆ, ಸಂಸ್ಕೃತಿ ಹಾಗೂ ಸಮುದಾಯ ಅಭಿವೃದ್ದಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಪ್ರತಿ ಸಂಘಕ್ಕೆ ಅನುದಾನವನ್ನು ನೀಡಲಾಗುವುದು. ಸಂಘದ ಚಟುವಟಿಕೆಗಳನ್ನು ಕ್ರಿಯಾತ್ಮಾಕವಾಗಿ ನಡೆಸಿಕೊಂಡು ಹೊಗಲು ಸಂಘದ ಸದಸ್ಯರು 3 ಪ್ರತಿನಿಧಿಗಳನ್ನು ಆಯ್ಕೆ ಮಾಡುವರು. ಈ ಪ್ರತಿನಿಧಿಗಳಲ್ಲಿ ಒಬ್ಬ ಮಹಿಳಾ ಪ್ರತಿನಿಧಿ ಕಡ್ಡಾಯವಾಗಿ ಇರತಕ್ಕದ್ದು. ಪ್ರತಿವರ್ಷ ಪ್ರತಿನಿಧಿಗಳ ಆಯ್ಕೆಯನ್ನು ಸರದಿ ಆಧಾರದ ಮೇಲೆ ಮಾಡಲಾಗುವುದು. 2009–10 ನೇ ಸಲಿನಿಂದ ಯಾವುದೆ ಅನುದನವನ್ನು ಈ ಸಂಘಗಳಿಗೆ ನೀಡಲಾಗಿಲ್ಲ.

## ಗ್ರಾಮೀಣ ಕ್ರೀಡೆಗಳು ಮತ್ತು ಪಂದ್ಯಾವಳಿಗಳು

2006–07ನೇ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ರಾಜ್ಯ ವಲಯದ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

1. ಹೋಬಳಿ ಮಟ್ಟದಲ್ಲಿ ಸಾಮೂಹಿಕ ಕ್ರೀಡೆಗಳನ್ನು ಏರ್ಪಡಿಸುವುದು.
2. ಅಂತರ ಯುವಕ ಸಂಘದ ಪಂದ್ಯಾವಳಿಗಳನ್ನು ಏರ್ಪಡಿಸುವುದು
3. ಆಯ್ಕೆ ಮಾಡಲಾದ ಸಂಘಗಳಿಗೆ ಕ್ರೀಡಾ ಸಲಕರಣೆಗಳನ್ನು ಒದಗಿಸುವುದು
4. ಪ್ರತಿಭಾವಂತ 10 ಯುವಕ/ಯುವತಿಯರಿಗೆ ಜಿಲ್ಲಾ ಕ್ರೀಡಾ ಪ್ರಶಸ್ತಿಗಳನ್ನು ನೀಡುವುದು.

## ಯುವಜನ ಸಮ್ಮೇಳನ, ಕಾರ್ಯಾಗಾರ, ತರಬೇತಿ, ಜಿಲ್ಲಾ ಯುವ ಪ್ರಶಸ್ತಿ

2006–07ನೇ ಸಾಲಿನಲ್ಲಿ ಪ್ರತಿ ಜಿಲ್ಲೆಯಲ್ಲಿ ರಾಜ್ಯ ವಲಯದ ಅನುದಾನದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

1. ತಾಲ್ಲೂಕು ಮಟ್ಟ/ಜಿಲ್ಲಾಮಟ್ಟದ ಯುವಜನ ಸಮ್ಮೇಳನ, ಕಾರ್ಯಾಗಾರ, ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸುವುದು.

2. ಕ್ರೀಡೆ, ಸಂಸ್ಕೃತಿ ಮತ್ತು ಸಮುದಾಯ ಅಭಿವೃದ್ಧಿ ಕ್ಷೇತ್ರದಲ್ಲಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸಿದ 05 ಯುವಕ/ಯವತಿಯರಿಗೆ ಮತ್ತು 2 ಸಾಂಘಿಕ ಜಿಲ್ಲಾ ಯುವ ಪ್ರಶಸ್ತಿಯನ್ನು ನೀಡುವುದು.

2009-10 ನೇ ಸಾಲಿನಿಂದ ನೇರವಾಗಿ ಜಿಲ್ಲಾಮಟ್ಟದ ಸಮ್ಮೇಳನ, ಕಾರ್ಯಗಾರ ಮತ್ತು ತರಬೇತಿ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ.

**ರಾಜ್ಯ ವಲಯದಿಂದ 2013-14ನೇ ಸಾಲಿಗೆ ಜಾರಿಗೆ ಬಂದ ಯೋಜನೆಗಳು**

1. ನಮ್ಮೂರ ಶಾಲೆ ನಮ್ಮೂರ ಯುವಜನರು: ಶಾಲಾ ಅಭಿವೃದ್ಧಿಯಲ್ಲಿ ಪರಿಣಾಮಕಾರಿಯಾಗಿ ಮತ್ತು ಯಶಸ್ವಿಯಾಗಿ ತೊಡಗಿಸಿಕೊಂಡಿರುವ ಯುವಸಂಘಗಳಿಗೆ 1.00 ಲಕ್ಷದ ನಗದು ಬಹುಮಾನವನ್ನು ನೀಡಲಾಗುತ್ತಿದೆ.
2. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ಸಾಧನೆ ಮಾಡಿದ ಶೈಕ್ಷಣಿಕ ಶುಲ್ಕವನ್ನು ಮರು ಪಾವತಿಸಲಾಗುತ್ತಿದೆ.

## ಪಂಚಾಯತ್ ಯುವ ಕ್ರೀಡಾ ಮತ್ತು ಖೇಲ್ ಅಭಿಯಾನ್

[illegible]

[illegible]

[illegible]

[illegible]

[illegible]

[illegible]

[illegible] 2008-09, 2009-10 [illegible] 2010-11 [illegible] .1.00 [illegible]

2009-10 [illegible] 2008-09 [illegible] .1.00 [illegible] .1.00 [illegible] 26 [illegible] .500.00 [illegible] .5000.00 [illegible]

**ಸೆಕ್ಷನ್ 4(1)(ಬಿ) ೫೫ ಪ್ರಕಾರ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ಹೊಣೆಗಾರಿಕೆ ಮತ್ತು ಕರ್ತವ್ಯಗಳು**

| | |
|---|---|
| ದಲಾಯತ್ | ಕಛೇರಿಯನ್ನು ಅಚ್ಚುಕಟ್ಟಾಗಿ ಚೊಕ್ಕಟವಾಗಿಡುವುದು. ಕಛೇರಿಯ ಕಡತಗಳು/ಟಪಾಲುಗಳನ್ನು ಆಯಾ ಶಾಖೆಗಳಿಗೆ ಹಾಗೂ ಇಲಾಖೆಗಳಿಗೆ ಶಾಖಾ ಮುಖ್ಯಸ್ಥರ ಸೂಚನೆ ಯಂತೆ ನೀಡುವುದು. ಸ್ಥಳೀಯ ಪತ್ರಗಳನ್ನು ಆಯಾ ಕಾರ್ಯಾಲಯಕ್ಕೆ ತಲುಪಿಸುವುದು. ಜೇರಾಕ್ಸ್ ಯಂತ್ರದ ನಿರ್ವಹಣೆ, ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| ದ್ವಿತೀಯ ದರ್ಜೆ ಸಹಾಯಕರು | ದಿನನಿತ್ಯದ ಟಪಾಲು ಸ್ವೀಕೃತಿ, ಸಂಬಂಧಿತ ಶಾಖೆಗಳಿಗೆ ವಿತರಣೆ ಇತ್ಯಾದಿ. ದೂರಾವಾಣಿ ಕರೆಗಳನ್ನು ಸ್ವೀಕರಿಸಿ ಅಧಿಕಾರಿಯವರಿಗೆ ಸಂಪರ್ಕ ಕಲ್ಪಿಸುವುದು. ಹೆಚ್‌ಆರ್‌ಎಂಎಸ್‌ನಲ್ಲಿ ವೇತನದ ಬಿಲ್ ತಯಾರಿಸುವುದು, ಸಂಬಂಧಿತ ಶಾಖೆಗಳಲ್ಲಿ ಸ್ವೀಕೃತಗೊಂಡ ಟಪಾಲುಗಳನ್ನು ಆ ದಿನವೇ ಅಥವಾ ಮರುದಿನ ಸಂಬಂಧಿತ ಕಡತಗಳಲ್ಲಿ ಮಂಡಿಸುವುದು. ಕಛೇರಿ ಪತ್ರ ವ್ಯವಹಾರ ಮಾಡುವುದು. ಎಲ್ಲಾ ನಗದು ಪುಸ್ತಕಗಳನ್ನು ನಿರ್ವಹಿಸುವುದು. ಲೆಕ್ಕಪತ್ರಗಳನ್ನು ಇಡುವುದು ಹಾಗೂ ಕಛೇರಿ ಮುಖ್ಯಸ್ಥರಿಗೆ ಸಲ್ಲಿಸಿ ಅನುಮೋದನೆ ಪಡೆಯುವುದು. ಮೇಲಾಧಿಕಾರಿಗಳು ಸೂಚಿಸುವ ಕರ್ತವ್ಯಗಳನ್ನು ನಿರ್ವಹಿಸುವುದು. |
| ಅಧೀಕ್ಷಕರು | ತಮ್ಮ ಶಾಖೆಗೆ ಸಹಾಯಕರಿಂದ ಬರುವ ಕಡತಗಳನ್ನು ಪರಿಶೀಲಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು. (ಹುದ್ದೆ ಖಾಲಿ ಇದೆ) |
| ಅಧೀಕ್ಷಕರು, ಜಿಲ್ಲಾ ಕ್ರೀಡಾ ಶಾಲೆ | ಜಿಲ್ಲಾ ಕ್ರೀಡಾ ವಸತಿ ಶಾಲೆಯ ದಿನ ನಿತ್ಯದ ನಿರ್ವಹಣೆ ನಗದು ಪುಸ್ತಕ, ಬಿಲ್ಲುಗಳ ನಿರ್ವಹಣೆ ಹಾಗೂ ವಸತಿ ಶಾಲೆಯ ಎಲ್ಲಾ ದಾಖಲೆಗಳ ನಿರ್ವಹಣೆ. (ಹುದ್ದೆ ಖಾಲಿ ಇದೆ) |
| ಸಹಾಯಕ ನಿರ್ದೇಶಕರು | ಇವರು ಕಛೇರಿಯ ಮುಖ್ಯಸ್ಥರಾಗಿದ್ದು ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ರಾಜ್ಯ ವಲಯಕ್ಕೆ ಮತ್ತು ಜಿಲ್ಲಾ ಪಂಚಾಯತ್ ವಲಯಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಾರೆ. ಜಿಲ್ಲಾ ಪಂಚಾಯತ್ ವಲಯದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ನಿರ್ವಹಣೆ. ಜಿಲ್ಲಾಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಇಲಾಖಾ ಮುಖ್ಯಸ್ಥರು ನೀಡಿದ ಸೂಚನೆಯಂತೆ ಕರ್ತವ್ಯ ನಿರ್ವಹಿಸುವುದು. |

**ಸೆಕ್ಷನ್ 4(1)(ಬಿ) (ಐಐಐ) ಪ್ರಕಾರ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ಸಂಸ್ಥೆಯು ತೀರ್ಮಾನ ಕೈಗೊಳ್ಳುವ ವಿಧಾನ ಮತ್ತು ಉತ್ತರದಾಯಿತ್ವದ ಮಾರ್ಗಗಳು**

| | |
|---|---|
| ದ್ವಿತೀಯ ದರ್ಜೆ ಸಹಾಯಕರು | ಶಾಖೆಯಲ್ಲಿ ಟಪಾಲು ಸ್ವೀಕೃತಿ ಪಡೆದ ನಂತರ, ಅವಶ್ಯಕತೆಯಿದ್ದಲ್ಲಿ ಹೊಸ ಕಡತಗಳನ್ನು ತೆರೆಯುವುದು ಅಥವಾ ಇರುವ ಕಡತಗಳಲ್ಲಿಯೇ ಪತ್ರಗಳನ್ನು ಪರಿಶೀಲಿಸಿ ತಮ್ಮ ಶಾಖಾ ಮುಖ್ಯಸ್ಥರಾದ ಅಧೀಕ್ಷಕರಿಗೆ ಕಳುಹಿಸುವುದು, ನಗದು ಪುಸ್ತಕಗಳನ್ನು ನಿರ್ವಹಿಸುವುದು. |
| ಅಧೀಕ್ಷಕರು | ತಮ್ಮ ಶಾಖೆಗೆ ಸಹಾಯಕರಿಂದ ಬರತಕ್ಕ ಕಡತಗಳನ್ನು ಮೇಲಧಿಕಾರಿಗಳಿಗೆ ಸಲ್ಲಿಸುವುದು. (ಹುದ್ದೆ ಖಾಲಿ ಇದೆ) |
| ಅಧೀಕ್ಷಕರು,<br>ಜಿಲ್ಲಾ ಕ್ರೀಡಾ ಶಾಲೆ | ಜಿಲ್ಲಾ ಕ್ರೀಡಾ ವಸತಿ ಶಾಲೆಯ ದಿನ ನಿತ್ಯದ ನಿರ್ವಹಣೆ ನಗದು ಪುಸ್ತಕ, ಬಿಲ್ಲುಗಳ ನಿರ್ವಹಣೆ ಹಾಗೂ ವಸತಿ ಶಾಲೆಯ ಎಲ್ಲಾ ದಾಖಲೆಗಳನ್ನು ನಿರ್ವಹಿಸುವುದು. ಮೇಲಧಿಕಾರಿಗಳಿಗೆ ವಸತಿ ನಿಲಯದೆ ನಿರ್ವಹಣೆ ಕುರಿತು ಕಾಲಕಾಲಕ್ಕೆ ಮಾಹಿತಿ ನೀಡುವುದು. ಅಗತ್ಯ ವಿಷಯಗಳನ್ನು ದಾಖಲು ಮಾಡಿ ಮೇಲಧಿಕಾರಿಗಳಿಗೆ ಸಲ್ಲಿಸುವುದು (ಹುದ್ದೆ ಖಾಲಿ ಇದೆ) |
| ಸಹಾಯಕ ನಿರ್ದೇಶಕರು | ಇವರು ಕಛೇರಿಯ ಮುಖ್ಯಸ್ಥರಾಗಿದ್ದು ತಮ್ಮ ಅಧಿನದಲ್ಲಿ ಬರತಕ್ಕ ಸಿಬ್ಬಂದಿ ವರ್ಗದವರು ಸಲ್ಲಿಸಲಾದ ಕಡತಗಳನ್ನು ಪರಿಶೀಲಿಸಿ ಅಗತ್ಯ ಬಿದ್ದಲ್ಲಿ ಮೇಲಧಿಕಾರಿಗಳಿಗೆ ತಮ್ಮ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು. ಕಾರ್ಯಾಲಯದ ನಿರ್ವಹಣೆಗೆ ಬೇಕಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು. ಕಾಲಕಾಲಕ್ಕೆ ಯೋಜನೆಗಳ ಅನುಮೋದನೆಗಾಗಿ ಜಿಲ್ಲಾ ಪಂಚಾಯತ್‌ಗೆ ಪ್ರಸ್ತಾವನೆಗಳನ್ನು ಸಲ್ಲಿಸುವುದು. |

**ಸೆಕ್ಷನ್ 4(1)(ಬಿ) (ಐಗಿ) ಪ್ರಕಾರ ಕಾರ್ಯಗಳ ನಿರ್ವಹಣೆಗೆ ರೂಪಿಸಿರುವ ಸೂತ್ರಗಳು**

| | |
|---|---|
| ದಲಾಯತ್ | ತಮಗೆ ವಹಿಸಲಾದ ಕರ್ತವ್ಯಗಳನ್ನು ತಕ್ಷಣ ನಿರ್ವಹಿಸುವುದು |
| ದ್ವಿತೀಯ ದರ್ಜೆ ಸಹಾಯಕರು | ಶಾಖೆಯಲ್ಲಿ ನಿರ್ವಹಿಸಬೇಕಾದ ಕರ್ತವ್ಯಗಳನ್ನು ಆ ದಿನವೇ ಅಥವಾ ಮರುದಿನ ನಿರ್ವಹಿಸತಕ್ಕದ್ದು |
| ಅಧೀಕ್ಷಕರು | ತಮ್ಮ ಶಾಖೆಯಲ್ಲಿ ಸ್ವೀಕರಿಸಲಾದ ಕಡತಗಳನ್ನು ಆ ದಿನವೇ ಅಥವಾ ಮರುದಿನ ಪರಿಶೀಲಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು<br>(ಹುದ್ದೆ ಖಾಲಿ ಇದೆ) |
| ಅಧೀಕ್ಷಕರು, ಜಿಲ್ಲಾ ಕ್ರೀಡಾ ಶಾಲೆ | ತಮ್ಮ ಶಾಖೆಯಲ್ಲಿ ಸ್ವೀಕರಿಸಲಾದ ಎಲ್ಲಾ ಪತ್ರಗಳು, ಕಡತಗಳನ್ನು ಆ ದಿನವೇ ಅಥವಾ ಮರುದಿನ ಪರಿಶೀಲಿಸಿ ಮೇಲಧಿಕಾರಿಗಳಿಗೆ ಸಲ್ಲಿಸುವುದು (ಹುದ್ದೆ ಖಾಲಿ ಇದೆ) |
| ಸಹಾಯಕ ನಿರ್ದೇಶಕರು | ತಮ್ಮ ಕಾರ್ಯಾಲಯದ ಕರ್ತವ್ಯಗಳನ್ನು ಆದ್ಯತೆ ಮೇರೆಗೆ ನಿರ್ವಹಿಸುವುದು. |

**ಸೆಕ್ಷನ್ 4(1)(ಬಿ) (ಗಿ) ಪ್ರಕಾರ ಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ಉದ್ಯೋಗಿಗಳು ಬಳಸುವ ನಿಯಮಗಳು, ವಿನಿಮಯಗಳು, ಅನುಸೂಚಿಗಳು, ಕೈಪಿಡಿಗಳು ಮತ್ತು ದಾಖಲೆಗಳು :–**

**<u>ಸಂಸ್ಥೆಯ ನಿಯಂತ್ರಣದಲ್ಲಿರುವ ದಾಖಲೆಗಳ ವಿವರಗಳು : ಸಿಬ್ಬಂದಿ ಶಾಖೆ</u>**

1. ಮಾಹಿತಿ ಹಕ್ಕು ಅಧಿನಿಯಮ 2005
2. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1958
3. ಕನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ,1958
4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ- 2001
5. ಕರ್ನಾಟಕ ನಾಗರೀಕ ಸೇವೆಗಳು(ನಡತೆ) ನಿಯಮಗಳು,1966
6. ಕರ್ನಾಟಕ ಆರ್ಥಿಕ ಸಂಹಿತೆ, 1958

**ಸೆಕ್ಷನ್ 4(1)(ಬಿ) (ಗಿಖ) ಪ್ರಕಾರ ಹೊಂದಿರುವ ಅಥವಾ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿಕೆಯನ್ನು:**

ಕಛೇರಿಯ ನಿಯಂತ್ರಣದಲ್ಲಿರುವ ದಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿಕೆ ಈ ಕೆಳಕಂಡಂತಿದೆ.

1. ವೇತನ ವಿತರಣೆ ಪುಸ್ತಕ.
2. ನಗದು ಪುಸ್ತಕ.
3. ಸೇವಾ ಪುಸ್ತಕಗಳು ಮತ್ತು ವಹಿಗಳು.
4. ಸಾಂದರ್ಭಿಕ ರಜೆಗಳ ರಿಜಿಸ್ಟರ್
5. ತಾಲ್ಲೂಕು ಕ್ರೀಡಾಂಗಣ ವಹಿಗಳು.
6. ಟಪಾಲು ಸ್ವೀಕೃತಿ ಪುಸ್ತಕ.
7. ರವಾನೆ ಪುಸ್ತಕ.
8. ಅನುದಾನ ಪುಸ್ತಕ.
9. ಟೋಕನ್ ಪುಸ್ತಕ.
10. ಎನ್‌ಕ್ಯಾಶ್‌ಮೆಂಟ್ ಪುಸ್ತಕ.
11. ತಾಲ್ಲೂಕು ಕ್ರೀಡಾಂಗಣಗಳ ಕ್ಯಾಶ್ ಪುಸ್ತಕಗಳು.
12. ಹಾಜರಾತಿ ಪುಸ್ತಕ.
13. ದಾಸ್ತಾನು ಪುಸ್ತಕ.
14. ಸವಿವರ ಸಾದಿಲ್ವಾರು ಪುಸ್ತಕ/ಕಡತಗಳು.
15. ಚಲನವಲನ ರಿಜಿಸ್ಟರ್
16. ಸ್ಟ್ಯಾಂಪ್ ಅಕೌಂಟ್ ರಿಜಿಸ್ಟರ್
17. ದೂರವಾಣಿ ಅಕೌಂಟ್ ರಿಜಿಸ್ಟರ್
18. ಯೋಜನೆಗಳ ಡಿ.ಸಿ ಬಿಲ್ ರಿಜಿಸ್ಟರ್
19. ಕಛೇರಿ ವೆಚ್ಚದ ಡಿ.ಸಿ.ಬಿಲ್ ರಿಜಿಸ್ಟರ್
20. ಚೆಕ್ ರಿಜಿಸ್ಟರ್
21. ಐ.ಖ.ಅ.ಖಜುಟಿಣಜಾಔಥಿ ರಿಜಿಸ್ಟರ್
22. ಉ.ಖ.ಂ ರಿಜಿಸ್ಟರ್
23. ಏ.ಉ.ಖ.ಆ.ಖಜುಟಿಣಜಾಔಥಿ ರಿಜಿಸ್ಟರ್
24. ಉ.ಕಈ.ಖಜುಟಿಣಜಾಔಥಿ ರಿಜಿಸ್ಟರ್
25. ಂ.ಅ. ಬಿಲ್ ರಿಜಿಸ್ಟರ್
26. ಖಿ.ಂ. ಬಿಲ್ ರಿಜಿಸ್ಟರ್
27. ಆಜಾಔಥಾ ರಿಜಿಸ್ಟರ್
28. ಅನುದಾನ ಬಿಡುಗಡೆ ರಿಜಿಸ್ಟರ್
29. ಅನುದಾನ ಸಂಹಿತೆ ರಿಜಿಸ್ಟರ್
30. ಮಾಹಿತಿ ಹಕ್ಕು ಅಧಿನಿಯಮ-2005ರ ರಿಜಿಸ್ಟರ್

31. ಇತರೆ ಕಡತಗಳು.

**ಸೆಕ್ಷನ್ 4(1)(ಬಿ) (೧೫) ಪ್ರಕಾರ ಕಾರ್ಯನೀತಿಯನ್ನು ರೂಪಿಸುವುದು ಅಥವಾ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂಥ ಯಾವುದೇ ವ್ಯವಸ್ಥೆಗಳ ವಿವರಗಳನ್ನು :**

ಇಲಾಖೆಯ ರಚನೆ ಮತ್ತು ಯೋಜನೆಗಳ ಅನುಷ್ಠಾನವನ್ನು ಸರ್ಕಾರದ ನಿಯಮಾವಳಿಗಳನ್ವಯ ಕಾರ್ಯಗತಗೊಳಿಸಲಾಗುತ್ತಿದ್ದು ವಿವಿಧ ಯೋಜನೆಗಳ ಅಡಿಯಲ್ಲಿ ಅನುದಾನಕ್ಕೆ ಸಂಬಂಧಿಸಿದಂತೆ, ನಿಗದಿತ ನಮೂನೆಗಳನ್ನು ಹೊಂದಿದ್ದು, ಫಲಾನುಭವಿಗಳು ಅಯಾ ಅನುದಾನಕ್ಕೆ ಸಂಬಂಧಿಸಿದ ನಿಗದಿತ ನಮೂನೆಗಳಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸಿದಲ್ಲಿ ಪರಿಶೀಲಿಸಿ ಸ್ಥಾಯಿ ಸಮಿತಿಯ ಅನುಮೋದನೆ ಪಡೆದು ಅನುದಾನ ಬಿಡುಗಡೆಗೊಳಿಸಲಾಗುತ್ತಿದೆ. ಈ ನಿಗದಿತ ನಮೂನೆಗಳನ್ನು ಪರಿಷ್ಕೃತಗೊಳಿಸಬೇಕಾದಲ್ಲಿ ಸಾರ್ವಜನಿಕರ ಸಲಹೆಗಳನ್ನು ಪಡೆದು ಸೂಕ್ತ ತಿದ್ದುಪಡಿಗಳನ್ನು ಮಾಡಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗುವುದು.

**ಸೆಕ್ಷನ್ 4(1)(ಬಿ) (೧೫೫) ಪ್ರಕಾರ ಆಡಳಿತ ಮಂಡಳಿ ಸಭೆಯ ಹೇಳಿಕೆಗಳು ಸಾರ್ವಜನಿಕ ಸಲಹೆಗಳಿಗೆ ಮುಕ್ತವಾಗಿ ತೆರೆದುಕೊಂಡಿವೆ ಅಂತಹ ಸಭೆಯ ನಡವಳಿಗಳು ಸಾರ್ವಜನಿಕರಿಗೆ ಲಭ್ಯವಾಗುತ್ತವೆಯೇ?**

ಆಡಳಿತ ಮಂಡಳಿಯ ಸಭೆಯ ಹೇಳಿಕೆಗಳನ್ನು ಸಂಬಂಧಿಸಿದವರಿಗೆ ಮುಕ್ತವಾಗಿ ಕಳುಹಿಸುವ ವ್ಯವಸ್ಥೆ ಇಲಾಖೆಗೆ ಅನ್ವಯಿಸುವುದಿಲ್ಲ.

**ಸೆಕ್ಷನ್ 4(1)(ಬಿ) (೫೯) ಪ್ರಕಾರ ಅಧಿಕಾರಿಗಳ ಮತ್ತು ನೌಕರರ ವಿವರ ಸೂಚಿ ಪುಸ್ತಕವನ್ನು : ಅಧಿಕಾರಿ/ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಚಿಕ್ಕಮಗಳೂರು, ಮತ್ತು ಸಿಬ್ಬಂದಿ ವರ್ಗದವರ ಹೆಸರು ಮತ್ತು ಹುದ್ದೆ ವಿವರಗಳು ಈ ಕೆಳಕಂಡಂತಿದೆ.**

| ಕ್ರ. ಸಂ. | ಅಧಿಕಾರಿ/ಸಿಬ್ಬಂದಿಗಳ ಹೆಸರು | ಪದನಾಮ |
|---|---|---|
| 1 | ಶ್ರೀ ಪಾಂಡುರಂಗಗೌಡ | ಸಹಾಯಕ ನಿರ್ದೇಶಕರು |
| 2 | ಹುದ್ದೆ ಖಾಲಿ ಇದೆ | ಅಧೀಕ್ಷಕರು |
| 3 | ಹುದ್ದೆ ಖಾಲಿ ಇದೆ | ಅಧೀಕ್ಷಕರು, ಜಿಲ್ಲಾ ಕ್ರೀಡಾಶಾಲೆ |
| 4 | ಶ್ರೀ ಟಿ.ಆರ್.ಸಂತೋಷ್ | ದ್ವಿ.ದ.ಸ |
| 5 | ಶ್ರೀ ರಂಗಪ್ಪ | ಡಿ ದರ್ಜೆ ನೌಕರರು |

**ಸೆಕ್ಷನ್ 4(1)(ಬಿ) (೫) ಪ್ರಕಾರ ವಿನಿಮಯಗಳಲ್ಲಿ ಉಪಸಂಬಂಧಿಸಿದಂತೆ ಪರಿಹಾರದ ವ್ಯವಸ್ಥೆಯೂ ಸೇರಿದಂತೆ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರ ಪಡೆಯುವ ಮಾಸಿಕ ಸಂಭಾವನೆ:**
**ಸಂಸ್ಥೆಯಲ್ಲಿ ಪ್ರತಿಯೊಬ್ಬ ಅಧಿಕಾರಿ/ನೌಕರರು ಮಾಹೆಯಾನ ಪಡೆಯುತ್ತಿರುವ ಮಾಸಿಕ ಸಂಭಾವನೆ**

**ಕಛೇರಿಯ ಸಿಬ್ಬಂದಿ ವಿವರ**

| ಕ್ರ. ಸಂ. | ಹುದ್ದೆ | | ದೂರವಾಣಿ ಸಂಖ್ಯೆ | ವೇತನ ಶ್ರೇಣಿ | ಮಂಜೂರಾದ | ಮಾಸಿಕ ವೇತನ |
|---|---|---|---|---|---|---|

| | | ಹೆಸರು | | | ಹುದ್ದೆಗಳ ಸಂಖ್ಯೆ | |
|---|---|---|---|---|---|---|
| 1 | ಸಹಾಯಕ ನಿರ್ದೇಶಕರು | ಶ್ರೀ ಪಾಂಡುರಂಗಗೌಡ | 08262 220324, 9480886460 | 22800-43200 | 1 | 34500/- |
| 2 | ಅಧೀಕ್ಷಕರು (ಕ್ರೀಡಾಶಾಲೆ) | ಹುದ್ದೆ ಖಾಲಿ ಇರುತ್ತದೆ | - | - | 1 | - |
| 3 | ಅಧೀಕ್ಷಕರು (ಕಛೇರಿ | ಜನವರಿ-13 ರಿಂದ ಹುದ್ದೆ ಖಾಲಿ ಇರುತ್ತದೆ | - | - | 1 | - |
| 4 | ದ್ವಿ.ದ.ಸ | ಟಿ.ಆರ್.ಸಂತೋಷ್ | 08262 220324 | 11600-21000 | 1 | 12983/- |
| 5 | ಡಿ ದರ್ಜೆ ನೌಕರರು | ರಂಗಪ್ಪ | 08262 220324 | 11000-19000 | 1 | 23528/- |

**ಸೆಕ್ಷನ್ 4(1)(ಬಿ) (ಫಿಳು) ಪ್ರಕಾರ ಮಾಹಿತಿ ಹಕ್ಕು ಕಾಯ್ದೆ 2005ರ ಚಾಪ್ಟರ್ 2-4(ಬಿ)11ರನ್ವಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಜಿಲ್ಲಾ ಪಂಚಾಯಿತಿಯಡಿಯಲ್ಲಿ 2013-14ನೇ ಸಾಲಿನಲ್ಲಿ ಯೋಜನೆ ಅಡಿಯಲ್ಲಿ ಒದಗಿಸಲಾಗಿರುವ ಹಣದಲ್ಲಿ ಮಾಚ್-2014 ರವರೆಗೆ ಬಿಡುಗಡೆ ಮಾಡಿರುವ ಹಣ ಮತ್ತು ವೆಚ್ಚದ ವಿವರಗಳು**

| ಕ್ರ. ಸಂ | ಯೋಜನೆಯ ಹೆಸರು | ಆಯವ್ಯಯ ) | ಬಿಡುಗಡೆ | ವೆಚ್ಚ | ಬಾಕಿ | ಷರಾ |
|---|---|---|---|---|---|---|
| 1 | 2205-00-104-0-26 ಕ್ರೀಡಾಕೂಟ, ರ್‍ಯಾಲಿಗಳ ಸಂಘಟನೆ ಮತ್ತು ಅದರಲ್ಲಿ ಭಾಗವಹಿಸುವವರಿಗೆ ಟಿಎ/ಡಿಎ | 18.00 | 17,95,000 | 15,59,777 | 2,35,223 | ತಾಲ್ಲೂಕುಮಟ್ಟದಿಂದ ರಾಜ್ಯಮಟ್ಟ ದವರೆಗೆ ದಸರಾ, ಯುವಜನ ಮೇಳ,ಯುವಜನೋತ್ಸವ ' ಕ್ರೀಡಾಕೂಟ ಸಂಘಟಿಸಲು & ಟಿಎ/ಡಿಎ ಪಾವತಿಸಲು &ಸಂಘ ಸಂಸ್ಥೆಗಳಿಗೆ ಅನುದಾನಕ್ಕೆ ವೆಚ್ಚ ಭರಿಸಲಾಗಿದೆ, |
| 2 | 2205-00-104-0-28 ಕ್ರೀಡಾಂಗಣ ಮತ್ತು ಇತರೆಗಳ ನಿರ್ಮಾಣ ಮತ್ತು ನಿರ್ವಹಣೆ | 20.00 | 20,00,000 | 19,99,720 | 280 | ಜಿಲ್ಲಾ ಸುಭಾಷ್‌ಚಂದ್ರ ಬೋಸ್ ಆಟದ ಮೈದಾನದಲ್ಲಿರುವ ಬಾಸ್ಕೆಟ್‌ಬಾಲ್ ಕೋರ್ಟ್ ಮತ್ತು ಸ್ವಿಮ್ಮಿಂಗ್‌ಪೋಲ್ ಪುನರ್ ನಿರ್ಮಾಣ, ಜನರೇಟರ್ ಕಟ್ಟಡದ ಹಣ ಸಂದಾಯಕ್ಕೆ ವೆಚ್ಚ ಭರಿಸಿದೆ. |
| 3 | 2205-00-104-0-29 ಕ್ರೀಡಾಶಾಲೆಗಳು | 4.80 | 4,80,000 | 4,77,689 | 2,311 | ಕ್ರೀಡಾಶಾಲೆ ನಿರ್ವಹಣೆಗೆ & ಸಹಾಯಕರ ಗೌರವಧನ ನೀಡಲು |

| | | | | | | |
|---|---|---|---|---|---|---|
| | | | | | | ವೆಚ್ಚಭರಿಸಲಾಗಿದೆ. |
| 4 | 2205–00–104–0–30 ಕಷ್ಟ ಪರಿಸ್ಥಿತಿಯಲ್ಲಿ ರುವ ಕ್ರೀಡಾ ಪಟುಗಳು ಮತು ಕುಸ್ತಿದಾರರಿಗೆ ಅರ್ಥಿಕ ನೆರವು | 9.81 | 9,81,000 | 7,08,750 | 2,72,250 | ಕುಸ್ತಿಪಟುಗಳಿಗೆ ಮಾಶಾಸನ ಬಿಡುಗಡೆ ಮಾಡಲಾಗಿದೆ. |
| 5 | 2205–00–104–0–31 ಗ್ರಾಮೀಣ ಕ್ರೀಡಾ ಕೇಂದ್ರಗಳು | 1.80 | 1,80,000 | 1,60,000 | 20,000 | ಅಂಕವಿಕಲ ಕ್ರೀಡಾಕೂಟ, ಕ್ರೀಡಾಶಾಲೆಗೆ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಗೆ ಮತ್ತು ರಾಜ್ಯ ಮಟ್ಟದ ಕ್ರೀಡಾಕೂಟ ಸಂಘಟಿಸಿದ ಸಂಘ ಸಂಸ್ಥೆಗಳಿಗೆ ಅನುದಾನ ನೀಡಲು ವೆಚ್ಚಭರಿಸಲಾಗಿದೆ. |
| 6 | 2205–00–104–0–34 ಒಳಾಂಗಣ ಕ್ರೀಡಾಂಗಣ ಮತ್ತುಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ | 2.00 | 2,00,000 | 2,00,000 | – | ರಾಜ್ಯಮಟ್ಟದಲ್ಲಿ ಭಾಗವಹಿಸುವ ಗ್ರಾಮೀಣ ಕ್ರೀಡಾಕೂಟದ ಸ್ಪರ್ಧಿಗಳಿಗೆ ಸ್ಪೋರ್ಟ್ಸ್ ಕಿಟ್ ವಿತರಣೆ & ಒಳಾಂಗಣ ಕ್ರೀಡಾಂಗಣ ನಿರ್ವಹಣೆಗೆ ವೆಚ್ಚ ಭರಿಸಲಾಗಿದೆ. |
| 7 | 2205–00–104–0–01 ಪಂಚಾಯತ್ ಯುವಕ್ರೀಡಾ ಹಾಗೂ ಖೇಲ್ ಅಭಿಯಾನ್ | 55.15 | 54,73,441 | 54,73,441 | – | ಪೈಕಾ ಗ್ರಾಮೀಣ ಮತ್ತು ಮಹಿಳಾ ಕ್ರೀಡಾಕೂಟ ಸಂಘಟನೆಗೆ ಮತ್ತು ಶಾಲೆಗಳ ಆಟದ ಮೈದಾನ ಅಭಿವೃದ್ಧಿಗೆ ವೆಚ್ಚಭರಿಸಲು |
| | **ಒಟ್ಟು** | **111.56** | **111,09,441** | **105,79,377** | **5,30,064** | |

**ಯೋಜನೇತರ ಅಡಿಯಲ್ಲಿ ಒದಗಿಸಲಾಗಿರುವ ಹಣದಲ್ಲಿ ಮಾರ್ಚ್–2014 ರವರೆಗೆ ಬಿಡುಗಡೆ ಮಾಡಿರುವ ಹಣ ಮತ್ತು ವೆಚ್ಚದ ವಿವರಗಳು (31.03.2014) ರವರೆಗೆ (ರೂ. ಲಕ್ಷಗಳಲ್ಲಿ)**

| ಕ್ರ. ಸಂ | ಯೋಜನೆಯ ಹೆಸರು | ಆಯವ್ಯಯ | ಬಿಡುಗಡೆ | ವೆಚ್ಚ | ಬಾಕಿ | ಷರಾ |
|---|---|---|---|---|---|---|
| 1 | 2205–00–104–0–27 ಸಹಾಯಕ ಯುವಜನ ಸೇವಾಧಿಕಾರಿಗಳು | 16.40 | 16.40 | 10.32 | 6.08 | ಸಿಬ್ಬಂದಿಯವರ ವೇತನ ಹಾಗೂ ಕಛೇರಿ ವೆಚ್ಚಕ್ಕೆ ವೆಚ್ಚಭರಿಸಲಾಗಿದೆ. |
| 2 | 2205–00–104–0–32 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿಯೇತರರಿಗೆ ಸಹಾಯ | 1.57 | 1.57 | 1.57 | – | ಯುವಕ, ಯುವತಿ ಸಂಘ ಗಳಿಗೆ ಸಲಕರಣೆ ಖರೀದಿ ಸಲು ವೆಚ್ಚಭರಿಸಲು |
| 3 | 2205–00–104–0–36 ಕ್ರೀಡಾ ಸಾಮಗ್ರಿಗಳ ಖರೀದಿಗಾಗಿ ಜಿಲ್ಲಾ, | 0.22 | 0.22 | 0.22 | – | ದೈನಂದಿನಕ್ರೀಡಾ ತರಬೇತಿ ಗಾಗಿ ಅಗತ್ಯ |

| | | | | | | |
|---|---|---|---|---|---|---|
| | ವಿಭಾಗೀಯ ಯುವಜನ ಸೇವಾ ಮಂಡಳಿಗಳಿಗೆ ಸಹಾಯ | | | | | ಕ್ರೀಡಾ ಸಾಮಗ್ರಿಗಳನ್ನು ಖರೀದಿ ಸಲು ವೆಚ್ಚ ಭರಿಸಲು |
| 4 | 2205–00–104–0–33 ಕ್ರೀಡಾ ಸಾಮಗ್ರಿ ಗಳನ್ನು ಕೊಳ್ಳಲು ಮತ್ತು ಕ್ರೀಡಾ ಬಯಲು ಅಭಿವೃದ್ಧಿ ಪಡಿಸಲು ವಿದ್ಯಾ ಮತ್ತು ಇತರೆ ಸಂಸ್ಥೆಗಳಿಗೆ ಸಹಾಯ | 1.12 | 1.12 | 1.12 | – | ಆಟದ ಮೈದಾನ ಅಭಿವೃದ್ಧಿಪಡಿಸಲು ವೆಚ್ಚ ಭರಿಸಲು |
| 5 | 2205–00–104–0–35 ಗ್ರಾಮಾಂತರ ಪ್ರದೇಶದಲ್ಲಿ ಕ್ರೀಡೆಗಳಿಗೆ ಪ್ರೋತ್ಸಾಹ | 0.55 | 0.55 | 0.55 | – | ಕ್ರೀಡಾ ಸಾಮಗ್ರಿ ಖರೀದಿ ಸಲು, ಯುವಸಂಪರ್ಕ ನಡೆಸಲುವೆಚ್ಚಭರಿಸಲು |
| | **ಒಟ್ಟು** | **19.86** | **19.86** | **13.78** | **6.08** | |

**ಸೆಕ್ಷನ್ 4(1)(ಬಿ) (ಫಿಖಖ) ಪ್ರಕಾರ ಹಂಚಿಕೆ ಮಾಡಲಾದ ಮೊಬಲಗನ್ನೊಳಗೊಂಡು, ಸಹಾಯಧನ ಕಾರ್ಯಕ್ರಮಗಳ ಜಾರಿಯ ವಿಧಾನ ಮತ್ತು ಅಂತಹ ಕಾರ್ಯಕ್ರಮಗಳ ಫಲಾನುಭವಿಗಳ ವಿವರಗಳನ್ನು:**

ಲೆಕ್ಕಶೀರ್ಷಿಕೆಯಡಿಯಲ್ಲಿ ಒದಗಿಸಿದ ಅನುದಾನದಂತೆ ಪ್ರಸ್ತಾವನೆಗಳನ್ನು ಜಿಲ್ಲಾಪಂಚಾಯತ್‌ನಿಂದ, ಅನುಮೋದನೆ ದೊರೆತ ಕೂಡಲೇ ಆರ್ಥಿಕ ವರ್ಷದ ಅಂತ್ಯದೊಳಗೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು.

**ಸೆಕ್ಷನ್ 4(1)(ಬಿ) (ಫಿಖಖಖ) ಪ್ರಕಾರ ನೀಡಿರುವ ರಿಯಾಯಿತಿಗಳನ್ನು, ಅನುಮತಿ ಪತ್ರಗಳನ್ನು ಅಥವಾಅಧಿಕಾರ ಪತ್ರಗಳನ್ನು ಪಡೆಯುವವರ ವಿವರಗಳು :**

ಸಂಸ್ಥೆಯು ಯಾವುದೇ ರಿಯಾಯಿತಿಯನ್ನು ಪಡೆದಿರುವುದಿಲ್ಲ ಹಾಗೂ ಯಾವುದೇ ರಿಯಾಯಿತಿಗಳನ್ನು ಪ್ರತ್ಯಾ ಯೋಜಿಸಿರುವುದಿಲ್ಲ.

**ಸೆಕ್ಷನ್ 4(1)(ಬಿ) (ಫಿಖಗಿ) ಪ್ರಕಾರ ಲಭ್ಯವಾಗುವ ಅಥವಾ ಹೊಂದಿರುವ ವಿದ್ಯುನ್ಮಾನ ರೂಪಕ್ಕೆ ಪರಿವರ್ತಿಸಿರುವ ಮಾಹಿತಿಗೆ ಸಂಬಂಧಿಸಿದಂತೆ ವಿವರಗಳು**

ಇಲಾಖೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಯೋಜನೆಗಳ ಮಾಹಿತಿಗಳ ವಿವರಗಳನ್ನು ಎಲೆಕ್ಟ್ರಾನಿಕ್ ರೂಪಕ್ಕೆ ಇಳಿಸುವ ಕಾರ್ಯವನ್ನು ಕೈಗೊಳ್ಳಲಾಗಿದೆ.

**ಸೆಕ್ಷನ್ 4(1)(ಬಿ) (ಫಿಗಿ) ಪ್ರಕಾರ ಸಾರ್ವಜನಿಕ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದರೆ ಅದರ ಕೆಲಸದ ಸಮಯವನ್ನು ಒಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರಗಳನ್ನು:**

ನಾಗರೀಕರು ಇಲಾಖೆಯ ಯಾವುದೇ ಮಾಹಿತಿಯನ್ನು ಪಡೆಯಲು ಇಚ್ಚಿಸಿದಲ್ಲಿ ಇಲಾಖೆಯ ಸಹಾಯಕ ನಿರ್ದೇಶಕರಿಗೆ ಮನವಿಯನ್ನು ಸಲ್ಲಿಸಿದ್ದಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಪ್ರಕಾರ ಪ್ರತಿ ಎ4 ಸೈಜಿನ ಹಾಳೆಗೆ ರೂ. 2/- ಶುಲ್ಕವನ್ನು ಪಡೆದು ಮಾಹಿತಿಯನ್ನು ಅರ್ಜಿದಾರರಿಗೆ ಒದಗಿಸಲಾಗುವುದು.

ಇಲಾಖೆಯ ಜಿಲ್ಲಾಮಟ್ಟದ ಕಾರ್ಯಾಲಯವು ಜಿಲ್ಲಾ ಕ್ರೀಡಾಂಗಣ, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಸೆಕ್ಷನ್ 4(1)(ಬಿ) (ಘಿಗಿಖ) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಹುದ್ದೆ ಮತ್ತು ಇತರೆ ವಿವರಗಳು**

| ಕ್ರ. ಸಂ. | ಹೆಸರು ಮತ್ತು ಪದನಾಮ | ದೂರವಾಣಿ | |
|---|---|---|---|
| | | ಕಛೇರಿ | ಮೊಬೈಲ್ |
| 1 | ಶ್ರೀ ಪಂಡುರಂಗಗೌಡ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಶತಮಾನೋತ್ಸವ ಕ್ರೀಡಾಂಗಣ, ಜ್ಯೋತಿನಗರ, ಚಿಕ್ಕಮಗಳೂರು-577102 | 08262-220324 | 94808-86460 |

**ಸೆಕ್ಷನ್ 4(1)(ಬಿ) (ಘಿಗಿಖಖ) ಪ್ರಕಾರ ನಿಯಮಿಸಬಹುದಾದಂತ ಇತರೆ ಮಾಹಿತಿಗಳು**

ಕಛೇರಿಯಲ್ಲಿ ಸಾರ್ವಜನಿಕ ಕುಂದುಕೊರತೆಗೆ ಸಂಬಂಧಿಸಿದಂತೆ ಶ್ರೀ. ಪಾಂಡುರಂಗಗೌಡ ಸಹಾಯಕ ನಿರ್ದೇಶಕರು, ಇವರನ್ನು ಜನಸ್ಪಂದನ ಕೋಶದ ಸಾರ್ವಜನಿಕ ಕುಂದುಕೊರತೆ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ಅಧಿನಿಯಮ 2000 ರಂತೆ ಸಹಾಯಕ ನಿರ್ದೇಶಕರು ಇವರು ಸಕ್ಷಮ ಪ್ರಾಧಿಕಾರಿ ಅಧಿಕಾರಿಯೆಂದು ಘೋಷಿಸಲಾಗಿದೆ. ಇಲಾಖೆಯಲ್ಲಿ ಪ್ರತಿತಿಂಗಳ ಮೊದಲನೆ ಶನಿವಾರವನ್ನು ಸಾರ್ವಜನಿಕ ಕುಂದುಕೊರತೆಯ ದಿನವನ್ನಾಗಿ ಆಚರಿಸಲಾಗುತ್ತಿದ್ದು ಸಾರ್ವಜನಿಕ ಕುಂದುಕೊರತೆಗಳನ್ನು ಆಲಿಸಲಾಗುತ್ತಿದೆ.

ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ
ಇಲಾಖೆ
ಚಿಕ್ಕಮಗಳೂರು